ಏನು ತೊಂದರೆ ? ಎಷ್ಟೋ ಸಮಸ್ಯೆಗಳನ್ನು ಬಗೆಹರಿಸಲಾಗಿದೆ ಇದನ್ನು ಯಾವಾಗ ಬಗೆಹರಿಸುತ್ತೀರಿ ? ನೌಕರರು ಸಂಬಳವಿಲ್ಲದೆ ಯಾವ ರೀತಿ ಕೆಲಸ ಮಾಡುವುದಕ್ಕೆ ಸಾಧ್ಯ ? ಅಜ್ಜೀಬಾಳ ಹೆಗಡೆಯವರು ಬರೆದ ಪತ್ರದಲ್ಲಿ ಮುಖ್ಯಮಂತ್ರಿಗಳ ಆಶ್ವಾಸನೆ ಇದೆ. ಅದನ್ನು ಕಾರ್ಯರೂಪಕ್ಕೆ ತರುತ್ತೀರಾ ? ಅದರ ಬಗ್ಗೆ ನೇರವಾಗಿ ಸಚಿವರು ಉತ್ತರ ಕೊಡಬೇಕು ನಾನು ಇನ್ನೇನು ಪ್ರಶ್ನೆಗಳನ್ನು ಕೇಳುವುದಿಲ್ಲ. ನಿರ್ದಿಷ್ಟವಾಗಿ ಹೇಳಿ ಅವರ ವರದಿ ಕೈ ಸೇರಿದೆಯೇ ? ಹಿಂದಿನ ಸರ್ಕಾರ ಕೊಟ್ಟಂತಹ ಆಶ್ವಾಸನೆಯನ್ನು ಈಡೇರಿಸುವುದಕ್ಕೆ ಆಗಿಲ್ಲ. ಈಗ ತಾವು ಆಶ್ವಾಸನೆಯನ್ನು ಈಡೇರಿಸಿ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಸರ್ಕಾರಿ ಮುಖ್ಯಸಚೇತಕರು).—ಮಾನ್ಯ ಸದಸ್ಯರು ಈಗಾಗಲೇ ಕ್ಲಾರಿಫಿಕೇಶನ್ ಕೇಳಿದ್ದಾರೆ. ಪುನಃ ಕೇಳುತ್ತೇನೆಂದು ಅರ್ಧಗಂಟೆ ಭಾಷಣ ಮಾಡಿದರೆ ಹೇಗೆ ?

ಶ್ರೀ ಬಿ. ಎಸ್. ಯಡಿಯೂರಪ್ಪ.—ಅಧ್ಯಕ್ಷರು ನನಗೆ ಅವಕಾಶ ಕೊಟ್ಟಿದ್ದಾರೆ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್,—ಕಳೆದ ಅಧಿವೇಶನದಲ್ಲಿ ನಾವು ಅಲ್ಲಿದ್ದಾಗ ಎಷ್ಟು ಕಾಲಾವಕಾಶ ಕೊಟ್ಟಿದ್ದಾರೆ ?

(ಗೊಂದಲ)

ಶ್ರೀಮತಿ ವಿನೋರಮ ಮಾಧ್ವರಾಜ್.—ಮಾನ್ಯ ಅಧ್ಯಕ್ಷರೆ, ಅಜ್ಜೀಬಾಳ ಹೆಗಡೆಯವರ ವರದಿ ನಮ್ಮ ಕೈಗೆ ಸಿಕ್ಕಿದೆ. ನೌಕರರು ಏನು ಮಾಡುತ್ತಿದ್ದಾರೆ ಅದನ್ನು ಕೈ ಬಿಡಬೇಕೆಂದು ಹೇಳಿದಾಗ, ನಮಗೆ ಭರವಸೆಯನ್ನು ಹಿಂದಿನ ಸರ್ಕಾರ ಕೊಟ್ಟಿತ್ತು, ಅವರು ಕೊಟ್ಟಂತಹ ಭರವಸೆಯನ್ನು ಈಡೇರಿಸಲಿಲ್ಲವೆಂದು ಹೇಳಿದರು. ಅವರು ಹೇಳಿದ ಹಾಗೆ ನಾನು ಹೇಳುವುದಕ್ಕಾಗುವುದಿಲ್ಲ. ನಾನು ಈಗಾಗಲೇ ಹೇಳಿದ್ದೇನೆ, ನಾನು ಭರವಸೆಯ ಮಂತ್ರಿಯಾಗಲಾರೆ. ನನಗೆ ಕಾಲಾವಕಾಶ ಬೇಕು. ಮುಷ್ಕರದಿಂದ ತತ್‌ಕ್ಷಣ ಎದ್ದು ನಿಮ್ಮ ಕೆಲಸಕ್ಕೆ ಹೋಗಿಯೆಂದು ನಾನು ಮನವಿ ಮಾಡಿದರೂ ಇನ್ನೂ ಸ[illegible] ಕುಳಿತಿದ್ದಾರೆ. ಅವರಾಗಿದ್ದರೆ ಅವರುಗಳನ್ನು ತರಿಸಿ ವಿಚಾರ ಮಾಡುತ್ತೇನೆ. ಅವರ ಈ ಬೇಡಿಕೆ ೧೯೮೫ ರಿಂದ ಇದೆ. ಕಳೆದ ಆರು ವರ್ಷಗಳಿಂದ ಪರಿಹಾರ ಮಾಡಲಿಕ್ಕೆ ಆಗಲಿಲ್ಲ, ನಾವೀಗ ಬಂದು ೧೫ ದಿವಸಗಳಲ್ಲಿ ಮಾಡುವುದಕ್ಕೆ ಆಗುತ್ತದೆಯೇ ?

ಶ್ರೀ ಎಸ್. ಹೆಚ್. ಕೌಜಲಗಿ.—ನಾವು ಮಾಡಲಿಲ್ಲವೆಂದು ಈಗ ಈ ಕಡೆ ಕುಳಿತಿದ್ದೇವೆ. ಈಗ ನೀವು ಮಾಡಿ.

ಶ್ರೀಮತಿ ವಿನೋರಮ ಮಾಧ್ವರಾಜ್.—ಖಂಡಿತಾ ಈ ಬಗ್ಗೆ ಆಲೋಚನೆ ಮಾಡಿ ಸರ್ಕಾರ ತತ್ಕ್ಷಣ ಕ್ರಮವನ್ನು ತೆಗೆದುಕೊಳ್ಳುತ್ತದೆಂದು ಹೇಳುತ್ತೇನೆ.

ಅಧ್ಯಕ್ಷರು.—ಮಾನ್ಯ ಸದಸ್ಯರಾದ ವಾಟಾಳ್ ನಾಗರಾಜ್‌ರವರೆ ನೀವು ಭಾಷಣ ಪ್ರಾರಂಭ ಮಾಡುವುದಕ್ಕೆ ಮೊದಲೇ ಹೇಳುತ್ತೇನೆ, ನೀವು ಎರಡು ನಿಮಿಷಗಳಲ್ಲಿ ನಿಮ್ಮ ಭಾಷಣವನ್ನು ಮುಗಿಸಬೇಕು.

ರಾಜ್ಯಪಾಲರ ಭಾಷಣಕ್ಕೆ ಸಲ್ಲಿಸಲಾದ ವಂದನಾ ನಿರ್ಣಯದ ಮೇಲೆ ಚರ್ಚೆ

ಶ್ರೀ ವಾಟಾಳ್ ನಾಗರಾಜ್.—ನಿಂತುಕೊಳ್ಳಲಿಕ್ಕೆ ಒಂದು ನಿಮಿಷ ಬೇಕು. ನಿಮ್ಮ ಗಮನ ಸೆಳೆಯುವುದಕ್ಕೆ ಒಂದು ನಿಮಿಷ ಬೇಕು. ಅಷ್ಟರಲ್ಲಿ ಎರಡು ನಿಮಿಷ ಮುಗಿದು ಹೋಗುತ್ತದೆ. ನಾನು ಬೆಳಗ್ಗಿನಿಂದ ನೋಡುತ್ತಿದ್ದೇನೆ, ನಿಮ್ಮ ಮುಖ ಕೋಪದಿಂದ ಕೂಡಿದಂತೆ ಇತ್ತು. ಈಗ ಪರವಾಗಿಲ್ಲ, ಸ್ವಲ್ಪ ನಗುತ್ತಾಡುತ್ತಿದ್ದೀರಿ. ೨೮ ಜೊತೆಗೆ ಒಂದು ಸೊನ್ನೆಯನ್ನು ಸೇರಿಸಿ ೨೮೦ ನಿಮಿಷಗಳ ಕಾಲಾವಕಾಶ ನನಗೆ ಕೊಟ್ಟರೆ ಉತ್ತಮ.

ಅಧ್ಯಕ್ಷರು.—ಶ್ರೀ ಭೈರೇಗೌಡರೇ, ನಿಮ್ಮ ಸಮಯವನ್ನು ಶ್ರೀ ವಾಟಾಳ್ ನಾಗರಾಜ್ ಅವರಿಗೆ ಕೊಡುತ್ತೀರಾ ?

ಶ್ರೀ ಸಿ. ಭೈರೇಗೌಡ.—ಇಲ್ಲ ಸ್ವಾಮಿ.

ಶ್ರೀ ವಾಟಾಳ್ ನಾಗರಾಜ್.—ಸ್ವಾಮಿ, ನನ್ನದೂ ಒಂದು ಪಕ್ಷ. ೧೯೭೨ರಲ್ಲಿ ನನ್ನದೂ ಒಂದು ಪಕ್ಷವಾಗಿದ್ದು ನಾನು ಅಲ್ಲಿ ಮುಂದುಗಡೆ ಕುಳಿತಿದ್ದೆ. ನನ್ನದೊಂದು ಪಕ್ಷ ಇದೆ. ೨೫ ವರ್ಷಗಳಿಂದ

ರಾಜಕೀಯವಾಗಿ, ತಾಂತ್ರಿಕವಾಗಿ ಪಕ್ಷದ ಸಿದ್ಧಾಂತ ಎಲ್ಲಾ ಇದೆ. ಆದರೆ ತಾಂತ್ರಿಕವಾಗಿ ಚುನಾವಣಾ ಆಯೋಗದ ದೃಷ್ಟಿಯಲ್ಲಿ ನನ್ನದು ಒಂದು ಪಕ್ಷ ಆಗದೇ ಇರಬಹುದು ಆದರೆ ಈ ನಾಡಿನಲ್ಲಿ ನನ್ನದು ಒಂದು ಪಕ್ಷವೇ. ನನಗೆ ಮುಂದಿನ ಸಾಲಿನಲ್ಲಿ ಸ್ಥಾನವನ್ನು ಕೊಡಬೇಕಿತ್ತು. ೧೯೭೨ರಲ್ಲಿ ತಾವು ಕೊಟ್ಟಿದ್ದೀರಿ. ಈಗ ಏನೋ ನನ್ನನ್ನು ಹಿಂದೆ ಹಾಕಿದ್ದಾರೆ. ನೀವು ಈಗ ಬಂದಿರುವುದರಿಂದ ನಾನು ಹಿಂದೆ ಇದ್ದರೂ ಸಹ ನನಗೆ ತಮ್ಮ ರಕ್ಷಣೆ ಇದೆಯೆಂದು ನಾನು ಅಂದುಕೊಂಡಿದ್ದೇನೆ. ಉಳಿದ ಪಕ್ಷಗಳಿಗೆ ಗೌರವ ಕೊಡುವಾಗ ಸಮಗ್ರವಾದ, ಸಂಪೂರ್ಣವಾದ ಆ ರಾಜಕೀಯ ಪಕ್ಷಗಳಿಗೆ ಕೊಟ್ಟಂಥ ಗೌರವವನ್ನು ನನಗೂ ಕೊಡಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು.—ಆಯಿತು. ಮೂರು ನಿಮಿಷಗಳಲ್ಲಿ ಮುಗಿಸಿಬಿಡಿ.

† ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ).—ಮಾನ್ಯ ಅಧ್ಯಕ್ಷರೇ, ಮಾನ್ಯ ರಾಜ್ಯಪಾಲರ ಭಾಷಣವನ್ನು ನಾನು ಓದಿದಾಗ ಕನ್ನಡ ಬೆಳವಣಿಗೆ ಬಗ್ಗೆ ಸಂಕ್ಷಿಪ್ತವಾಗಿ ತಮ್ಮ ಸರ್ಕಾರ ಏನು ಆಸ್ಥೆ ವಹಿಸಿದೆ ಎಂದು ಕೇವಲ ನಾಲ್ಕು ಪದಗಳಲ್ಲಿ ಮುಗಿಸಿದ್ದಾರೆ. ಆದರೆ ಕನ್ನಡದಬೆಳವಣಿಗಾಗಿ ಯಾವುದೇ ಸರ್ಕಾರಗಳು ಒಂದು ಸಮಗ್ರವಾದಂಥ ಯೋಜನೆಯನ್ನಾಗಲೀ ನೀತಿಯನ್ನಾಗಲೀ, ನಿರೂಪಣೆಯನ್ನಾಗಲೀ ಮಾಡಿಕೊಳ್ಳದೆ ಬಹಳ ಅತ್ಯಂತ ಶೋಚನೀಯವಾದ ಆಡಳಿತವನ್ನು ನಡೆಸಿಕೊಂಡು ಬಂದಿದ್ದಾರೆ, ಅಧ್ಯಕ್ಷರೇ, ನಾನು ತಮ್ಮ ಮೂಲಕ ಈ ಸರ್ಕಾರಕ್ಕೆ ಅತ್ಯಂತ ತೀವ್ರತರವಾದಂಥ ಒತ್ತಾಯವನ್ನು ತರುತ್ತಿದ್ದೇನೆ. ಅದು ಏನೆಂದರೆ, ಕನ್ನಡವನ್ನು ನಾವು ಆಡಳಿತ ಭಾಷೆಯನ್ನಾಗಿ ಒಪ್ಪಿದಾಗ ಕನ್ನಡವನ್ನು ಬಳಸುವುದಕ್ಕೆ ಸಮಗ್ರವಾದಂಥ ಒಂದು ಚಿಂತನೆ, ಯೋಜನೆಯನ್ನು ರೂಪಿಸುವುದಕ್ಕೆ ಒಂದು ವಿಶೇಷವಾದಂಥ ಯೋಜನೆಯನ್ನು ಕಾರ್ಯರೂಪಕ್ಕೆ ತರುವ ರೀತಿಯಲ್ಲಿ ಈ ವರ್ಷದಿಂದ ಮುಂದಿನ ವರ್ಷಗಳಲ್ಲಿ ಅಂದರೆ ಕನಿಷ್ಠ ಐದು ವರ್ಷಗಳ ಯೋಜನೆಯನ್ನು ಹಾಕಿಕೊಂಡು, ರಾಜ್ಯದಲ್ಲಿ ಸಮಗ್ರವಾದ ರೀತಿಯಲ್ಲಿ ಕನ್ನಡ ಆಡಳಿತ ಭಾಷೆಯಾಗುವುದಕ್ಕೆ ಅವಕಾಶವನ್ನು ಸರ್ಕಾರ ಕಲ್ಪಿಸಿಕೊಡಬೇಕೆಂದು ನಾನು ಸರ್ಕಾರದಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ಮಾನ್ಯ ಅಧ್ಯಕ್ಷರೇ, ತಮಗೆ ಒಂದು ಉದಾಹರಣೆಯನ್ನು ಹೇಳುತ್ತಿದ್ದೇನೆ. ನನ್ನ ಕೊಠಡಿಗೆ ಈ ಪುಸ್ತಕಗಳು ಬಂದವು. (ಪುಸ್ತಕಗಳ ಕಟ್ಟನ್ನು ಸಭೆಯಲ್ಲಿ ಎತ್ತಿ ತೋರಿಸಿದರು) ತಾವು ಸ್ವಲ್ಪ ಇದರ ಬಗ್ಗೆ ಗಮನಹರಿಸಬೇಕು. ಇವೆಲ್ಲಾ ಈ ಸರ್ಕಾರದ ವಿವಿಧ ಮಂಡಲಿಗಳು, ನಿಗಮಗಳು ಮತ್ತು ತಮ್ಮ ತಮ್ಮ ಇಲಾಖೆಗಳಿಗೆ ಸಂಬಂಧಪಟ್ಟಂತೆ ಕಾಗದ ಪತ್ರಗಳು ಆಗಿವೆ. ನಾವೆಲ್ಲರೂ ಈ ರಾಜ್ಯದ ಆಡಳಿತ ಭಾಷೆ ಕನ್ನಡ ಎಂದು ಹೇಳುತ್ತೇವೆ. ಆದರೆ ಒಂದಾದರೂ ವರದಿಗಳು ಇದರಲ್ಲಿ ಕನ್ನಡದಲ್ಲಿ ಬಂದಿಲ್ಲ. ಇನ್ನು ಐದು ವರ್ಷಗಳಲ್ಲಿ ಇಂಥ ಸುಮಾರು ಪುಸ್ತಕಗಳು ನಮಗೆ ಬರುತ್ತವೆ, ಎಲ್ಲವನ್ನೂ ಪರಿಗಣಿಸಿದರೆ ಸುಮಾರು ೧೦೦ ಟ್ರಕ್ ಲೋಡ್ ತುಂಬಾ ಇಂತಹ ಪುಸ್ತಕಗಳು ಬರುತ್ತವೆ. ಇಂಗ್ಲೀಷ್ ಭಾಷೆಯಲ್ಲಿರುವ ಈ ಪುಸ್ತಕಗಳನ್ನು ತಮಗೆ ತೋರಿಸಬೇಕು ಎಂದು ನಾನು ಇಲ್ಲಿಗೆ ತಂದಿದ್ದೇನೆ ಈ ರಾಜ್ಯದ ಆಡಳಿತದಲ್ಲಿ ಹೇಳುವುದು ಒಂದು, ಮಾಡುವುದು ಇನ್ನೊಂದು ಆಗಿದೆ, ತಮ್ಮ ಮೂಲಕ ನಾನು ಸರ್ಕಾರಕ್ಕೆ ಅತ್ಯಂತ ಕಳಕಳಿಯಿಂದ ಮನವಿ ಸಲ್ಲಿಸಲು ಇಚ್ಛಿಸುತ್ತೇನೆ ಏನೆಂದರೆ ಆಡಳಿತ ಭಾಷೆಯನ್ನು ಸಮಗ್ರವಾಗಿ ಜಾರಿಗೆ ತರತಕ್ಕ ಆತ್ಮಶುದ್ಧಿ, ಅಂತಃಕರಣ ಈ ಸರ್ಕಾರಕ್ಕೆ ಬರಬೇಕೆಂದು ತಿಳಿಸಿ, ಈ ಭಾಷಾವಾರು ಪ್ರಾಂತ್ಯಗಳು ರಚನೆಯಾದಂಥ ಸಂದರ್ಭದಲ್ಲಿ ನಮ್ಮದೂ ಒಂದು ಭಾಷಾವಾರು ಪ್ರಾಂತ್ಯ ರಚನೆಯಾಯಿತಲ್ಲಾ. ಈ ಭಾಷಾವಾರು ಪ್ರಾಂತ್ಯಕ್ಕಾಗಿ ಈ ನಾಡಿನ ಹಿರಿಯರೆಲ್ಲರೂ ಅದರಲ್ಲಿಯೂ ಮುಖ್ಯವಾಗಿ ಶ್ರೀ ಆಲೂರು ವೆಂಕಟರಾಯರು, ಶ್ರೀ ನಿಜಲಿಂಗಪ್ಪನವರು, ಶ್ರೀ ಹಳ್ಳಿಕೇರಿಯವರು, ಅದಿಯಾಗಿ ನೂರಾರು ಜನ ಈ ನಾಡಿನ ಭಾಷೆಗಾಗಿ, ಸಂಸ್ಕೃತಿಗಾಗಿ ದುಡಿದರು.

ಅಧ್ಯಕ್ಷರು.—ಶ್ರೀ ಹನುಮಂತಯ್ಯನವರೂ ಕೂಡ.

ಶ್ರೀ ವಾಟಾಳ್ ನಾಗರಾಜ್.—ಹೌದು. ಶ್ರೀ ಕೆಂಗಲ್ ಹನುಮಂತಯ್ಯನವರು ಈ ನಾಡಿನ ಅಭಿವೃದ್ಧಿಗಾಗಿ, ಏಕೀಕರಣಕ್ಕಾಗಿ ಹೋರಾಟ ಮಾಡಿ ತಮ್ಮ ಅಧಿಕಾರವನ್ನೇ ಕಳೆದುಕೊಂಡರು. ಈ ಸಂದರ್ಭದಲ್ಲಿ ಶ್ರೀ ಕೆಂಗಲ್ ಹನುಮಂತಯ್ಯನವರ ಸ್ಮರಣೆ ಮಾಡಿಕೊಳ್ಳಬೇಕು. ಇಲ್ಲಿ ಸಾರ್ವಜನಿಕ ಸಮ್ಮೇಳನ ನಡೆದಾಗ ಯಾರ್ಯಾರನ್ನೋ ನೆನೆಸಿದರು. ಆದರೆ ಕೆಂಗಲ್ ಹನುಮಂತಯ್ಯನವರ ಹೆಸರಿನ ಪ್ರಸ್ತಾಪ ಮಾತ್ರ ಆ ಸಭೆಯಲ್ಲಿ ಬರಲಿಲ್ಲ. ಮಾರ್ಗದರ್ಶನದವರೂ ಕೂಡ ಕೆಂಗಲ್ ಹನುಮಂತಯ್ಯನವರ ಪ್ರತಿಮೆ ಕಡೆ ತಮ್ಮ ಉಪಕರಣಗಳನ್ನು ತಿರುಗಿಸಲಿಲ್ಲ.ಇದರಿಂದ ನನ್ನ ಮನಸ್ಸಿಗೆ ಬಹಳ ನೋವಾಗಿದೆ. ಮಾನ್ಯ ಹನುಮಂತಯ್ಯನವರ ಕಾಲದಲ್ಲ ಕನ್ನಡ ಸಂಸ್ಕೃತಿ ಇಲಾಖೆ ಪ್ರಾರಂಭವಾಯಿತು. ಕನ್ನಡ

† ಈ ಚಿಹ್ನೆ ಸಂಬಂಧಪಟ್ಟ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಸಾಹಿತ್ಯಕ್ಕಾಗಿ, ಕನ್ನಡಿಗರಿಗಾಗಿ, ಮಹಾಭಾರತ, ರಾಮಾಯಣ ಗ್ರಂಥಗಳನ್ನು ಬಹಳ ದೊಡ್ಡ ರೀತಿಯಲ್ಲಿ ಮುದ್ರಣ ಮಾಡಿಸಿ ಅತ್ಯಂತ ಕಡಿಮೆ ದರದಲ್ಲಿ ಅಂದರೆ, ಶಿರೂಪಾಯಿಗಳಿಗೆ ಒಂದು ಪುಸ್ತಕ ದಂತೆ ಮಾರಿಸಿದರು. ಮತ್ತೊಂದು ವಿಚಾರ ಹೇಳಬೇಕಾದರೆ. ಈ ಸಭೆಯಲ್ಲಿ ಕೆಂಗಲ್ ಹನುಮಂತಯ್ಯನವರ ಚಿತ್ರಪಟ ಇರಬೇಕೆಂದು ತಮ್ಮ ಮೂಲಕ ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ. ಈ ಸಭೆಯನ್ನು ಕಟ್ಟಿಸಿದಂಥ ಶಿಲ್ಪಿ ಯಾರು ? ಅವರ ಚಿತ್ರಪಟ ಈ ಸಭೆಯಲ್ಲಿ ಯಾವ ಮೂಲೆಯಲ್ಲಿ ಇಲ್ಲ. ಇದನ್ನು ಎರಡೂ ಕಡೆಯವರು ಒಪ್ಪುತ್ತಾರೆಂದು ನಾನು ಅಂದುಕೊಂಡಿದ್ದೇನೆ. ಈ ವಿಚಾರದಲ್ಲಿ ಸರ್ಕಾರ ಕ್ರಮಕೈಗೊಳ್ಳಬೇಕೆಂಬ ಮನವಿಯನ್ನು, ತಮ್ಮ ಮೂಲಕ ಸಲ್ಲಿಸುತ್ತಿದ್ದೇನೆ. ಹನುಮಂತಯ್ಯನವರ ಆಳೆತ್ತರದ ಚಿತ್ರ ಈ ಸಭೆಯಲ್ಲಿದ್ದರೆ ಈ ಸಭೆಗೆ ಒಂದು ಘನತೆ ಮತ್ತು ಗಾಂಭೀರ್ಯ ಬರುತ್ತದೆ.

ಇನ್ನು ೧೯೫೬ರಲ್ಲಿ ಕರ್ನಾಟಕ ವಿಕೀಕರಣವಾಗಿ ಭಾಷಾವಾರು ಪ್ರಾಂತ್ಯ ರಚನೆಯಾಯಿತು. ಇವತ್ತು ಏನಾಗಿದೆಯೆಂದರೆ ೧೯೫೬ ರಿಂದ ಇಲ್ಲಿಯವರೆಗೂ ಒಂದು ಕಡೆ ಕೇರಳ, ಮತ್ತೊಂದು ಕಡೆ ಆಂಧ್ರ, ಮತ್ತೊಂದು ಕಡೆ ತಮಿಳುನಾಡು, ಈ ಪ್ರಕಾರ ಕರ್ನಾಟಕ ರಾಜ್ಯಕ್ಕೆ ಸುಮಾರು, ೮೦ಲಕ್ಷ ದಿಂದ ಒಂದು ಕೋಟಿ ಜನ ಇಲ್ಲಿಗೆ ವಲಸೆ ಬಂದಿದ್ದಾರೆ. ಸಾಂಸ್ಕೃತಿಕವಾಗಿ, ರಾಜಕೀಯವಾಗಿ, ಆರ್ಥಿಕವಾಗಿ, ಕನ್ನಡಿಗರ ಮೇಲೆ ಇದರ ಪರಿಣಾಮ ಬಿದ್ದಿದೆ ಈ ಮಾತನ್ನು ಹಿಂದಿನ ಸರ್ಕಾರದಲ್ಲಿ ಮಾನ್ಯ ಲಕ್ಷ್ಮೀಸಾಗರ್ ಸಚಿವರು ಇದ್ದಾಗ ಹೇಳಿದ್ದರು, ಈ ರೀತಿ ವಲಸೆ ಬರುವುದನ್ನು ತಡಯಲೇ ಬೇಕು. ಇದನ್ನು ತಡೆಯದೇ ಹೋದರೆ. ಕರ್ನಾಟಕಕ್ಕೆ ಅತ್ಯಂತ ಶೋಚನೀಯ ಪರಿಸ್ಥಿತಿ ಬರುತ್ತವೆ ಎನ್ನುವ ಮಾತನ್ನು ಅವರು ಹೇಳಿದ್ದರು. ಆದರೆ ಇದುವರೆಗೂ ಸರ್ಕಾರ ಈ ವಿಚಾರದಲ್ಲಿ ಕಾರ್ಯ ಕ್ರಮ ಹಾಕಿಕೊಂಡಿಲ್ಲ, ಈ ರೀತಿ ವಲಸೆ ಬರುವವರನ್ನು ತಡೆದು ಕರ್ನಾಟಕದ ರಕ್ಷಣೆ ಮಾಡಿಲ್ಲ. ಇನ್ನು ೧೦ ವರ್ಷಗಳಲ್ಲಿ, ಈ ಪ್ರಾಂತ್ಯ ರಚನೆ ಏನಾಗಿದೆ. ಅದಕ್ಕೆ ವಿರುದ್ಧವಾದ ಸಮಸ್ಯೆ ಉಂಟಾಗುತ್ತದೆ, ಮತ್ತು ಇವರ ನಿಲುವು ಮತ್ತು ನೀತಿ ಅದಕ್ಕೆ ವಿರುದ್ಧವಾಗುತ್ತದೆ. ಕರ್ನಾಟಕದಲ್ಲಿ ಕನ್ನಡಿಗರು ಹಿಂದುಳಿದವರಾಗಿ. ಬೇರೆ ಭಾಷೆಯವರು ಹೆಚ್ಚಾಗತಕ್ಕೆ ಪರಿಸ್ಥಿತಿ ಬರುತ್ತದೆ. ಒಮ್ಮೆ ರಾಷ್ಟ್ರಪತಿಗಳು ಕರ್ನಾಟಕ ರಾಜ್ಯಕ್ಕೆ ಬಂದಾಗ, ಆಗಿನ ಮುಖ್ಯಮಂತ್ರಿಗಳು ಕೇಂದ್ರದ ಕಾರ್ಖಾನೆಗಳಲ್ಲಿ ಸ್ಥಳೀಯರಿಗೇ ಹುದ್ದೆ ಕೊಡಬೇಕೆಂದು ಮನವಿ ಮಾಡಿದರು. ಇವತ್ತು ಸರ್ಕಾರವಲ್ಲಿ ಸರೋಜಿನಿ ಮಹಿಷಿ ವರದಿ ಇದೆ. ಕನ್ನಡಿಗರ ಉದ್ಯೋಗದ ಬಗ್ಗೆ, ಒಂದು ವಿಕ ಸದಸ್ಯ ಆಯೋಗವನ್ನು ಸರ್ಕಾರ ನೇಮಕ ಮಾಡಿತ್ತು. ಆ ಆಯೋಗ ಸಹ ಸರ್ಕಾರಕ್ಕೆ ವರದಿಯನ್ನು ಕೊಟ್ಟಿದೆ. ಆ ವರದಿಯ ಬಗ್ಗೆ ಸಹ ಇದುವರೆಗೂ ಸರ್ಕಾರ ಕ್ರಮ ಕೈಗೊಂಡಿರುವುದಿಲ್ಲ. ಈ ಹಿಂದಿನ ರಾಮಕೃಷ್ಣ ಹೆಗಡೆಯವರ ಸರ್ಕಾರ ಇದನ್ನು ಕಾರ್ಯಗತ ಮಾಡಿಲಿಲ್ಲ, ಇದನ್ನು ಅತ್ಯಂತ ಜರೂರಾಗಿ ಕಾರ್ಯಗತ ಮಾಡಬೇಕು. ಇದನ್ನು ಕಾರ್ಯಗತ ಮಾಡದಿದ್ದರೆ, ಕನ್ನಡಿಗರಿಗೆ ಅತ್ಯಂತ ಘೋರ ಅನ್ಯಾಯ ಮಾಡಿಂತಾಗುತ್ತದೆ ಎಂದು ಹೇಳಬೇಕಾಗುತ್ತದೆ. ಮಾನ್ಯ ವೀರೇಂದ್ರಪಾಟೀಲರ ಸರ್ಕಾರ ಈ ಕೆಲಸವನ್ನು ಕೂಡಲೇ ಕಾರ್ಯಗತ ಮಾಡಬೇಕೆಂದು ಅತ್ಯಂತ ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತೇನೆ. ಇದರ ಜೊತೆಯಲ್ಲಿ ಕರ್ನಾಟಕದ ಅನೇಕ ಸಮಸ್ಯೆಗಳು ಇವೆ ರೈಲ್ವೆ ಲೈನುಗಳು, ವಿಜಯನಗರ ಉಕ್ಕಿನ ಕಾರ್ಖಾನೆ ಇನ್ನು ಮುಂತಾದ ಸಮಸ್ಯೆಗಳಿವೆ. ಹಿಂದೆ ವೀರೇಂದ್ರ ಪಾಟೀಲರು ಮುಖ್ಯಮಂತ್ರಿಯಾಗಿದ್ದಾಗ, ದಿವಂಗತ ಪ್ರಧಾನಿ ಇಂದಿರಾಗಾಂಧಿಯವರು ತೋರಣಗಲ್‌ನಲ್ಲಿ ವಿಜಯನಗರ ಉಕ್ಕಿನ ಕಾರ್ಖಾನೆ ಆಗಬೇಕು ಎಂದು ಅಡಿಗಲ್ಲು ಇಟ್ಟು, ಈ ಕ್ಷಣವವರೆಗೂ ಇವರ ಬಗ್ಗೆ ಬರೀ ಹೇಳಿಕೆಗಳನ್ನು ನೋಡುತ್ತಿದ್ದೇವೆ, ಬರೀ ಮಾಡುತ್ತೇವೆ, ನೋಡುತ್ತೇವೆ ಎಂದು ಹೇಳುತ್ತಾರೆಯೇ ವಿನಃ ಯಾವುದೇ ಕೆಲಸ ಆಗುತ್ತಾ ಇಲ್ಲ. ವಿಜಯನಗರ ಉಕ್ಕಿನ ಕಾರ್ಖಾನೆ ಆಗುತ್ತದೆಯೋ ಅಥವಾ ಇಲ್ಲವೇ ಎಂಬುದನ್ನು ಕೇಂದ್ರ ಸರ್ಕಾರ ಸ್ಪಷ್ಟಪಡಿಸಬೇಕೆಂದು ತಮ್ಮ ಮೂಲಕ ಒತ್ತಾಯ ಮಾಡುತ್ತಾ, ರಾಜ್ಯ ಸರ್ಕಾರವೂ ಕೇಂದ್ರಕ್ಕೆ ಒತ್ತಾಯ ತರಬೇಕೆಂದು ಅತ್ಯಂತ ವಿನಯದಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ನಮಗೆ ಬಂದಿರತಕ್ಕ ರೈಲ್ವೆ ಲೈನಗಳು ಎಷ್ಟು ಇನ್ನು ಎಷ್ಟೆಷ್ಟು ರೈಲ್ವೆ ಲೈನಗಳು ಬರಬೇಕಾಗಿದೆ. ಇವತ್ತು ದಕ್ಷಿಣ ಇಂಡಿಯಾದಲ್ಲಿ ತಮಿಳುನಾಡಿಗೆ ಹೆಚ್ಚು ಕೊಟ್ಟಿದ್ದಾರೆ, ಆಂಧ್ರಕ್ಕೆ ಹೆಚ್ಚು ಕೊಟ್ಟಿದ್ದಾರೆ. ಕೇರಳಕ್ಕೆ ಹೆಚ್ಚು ಕೊಟ್ಟಿದ್ದಾರೆ. ಕೇವಲ ಈ ಮೂರು ರಾಜ್ಯಗಳಿಗೇ ಕೊಟ್ಟಿದ್ದಾರೆ. ಕರ್ನಾಟಕದಲ್ಲಿ ರೈಲ್ವೆ ಲೈನುಗಳ ಬಗ್ಗೆ ಚಕಾರ ಎತ್ತಲೆಲ್ಲ. ಸ್ವಾತಂತ್ರ್ಯ ಬಂದು ಇಷ್ಟು ವರ್ಷಗಳಾಯಿತು, ಆದರೆ ಚಾಮರಾಜನಗರ-ಸತ್ಯಮಂಗಲ ರೈಲ್ವೆ ಲೈನು ಕೆಲಸ ಇನ್ನೂ ಪ್ರಾರಂಭವಾಗಿಲ್ಲ. ಇದರ ಬಗ್ಗೆ ಅಷ್ಟಾಗಿ ಗಮನಹರಿಸುತ್ತಾ ಇಲ್ಲ.

ಬೆಂಗಳೂರು ಮೈಸೂರು ಬ್ರಾಡ್‌ಗೇಜ್ ಬಗ್ಗೆ ದೇವರಾಜ ಅರಸ್ ಅದರು ಮುಖ್ಯಮಂತ್ರಿ ಯಾಗಿದ್ದಾಗ ಮಧುದಂಡವತೆ ಅವರು ಅಡಿಗಲ್ಲು ಹಾಕಿದರು. ಇದಕ್ಕೆ ಇಲ್ಲಿಯವರೆಗೆ ಕೊಟ್ಟ ರೈತಕ್ಕಂತ ಹಣವಾದರೂ ಎಷ್ಟು ? ಬಹಳ ಕಡಿಮೆ ಎಂದರೆ ಅರವತ್ತು ಸಾವಿರ ಕೋಟಿ ರೂಪಾಯಿಗಳ ಈ

ಯೋಜನೆಗೆ ಕೇವಲ ೮ ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ ಎಂದು ಹೇಳಿದರೆ ಇದು ಅತ್ಯಂತ ನಾಚಿಕೆಗೇಡು. ಇವತ್ತು ಮಧುದಂಡವತೆಯವರು ಕೇಂದ್ರದಲ್ಲಿ ಹಣಕಾಸು ಸಚಿವರಾಗಿದ್ದಾರೆ. ಅವರು ಅಂದು ಅತ್ಯಂತ ಪ್ರಾಮಾಣಿಕವಾಗಿ ಅಡಿಗಲ್ಲನ್ನು ಹಾಕಿದ್ದರು. ಇವತ್ತು ನಮ್ಮ ಜಾರ್ಜ್ ಫರ್ನಾಂಡಿಸ್‌ರವರು ಕೇಂದ್ರದ ರೈಲ್ವೆ ಮಂತ್ರಿಗಳಾಗಿದ್ದಾರೆ. ಅವರು ಒಂದು ಹೇಳಿಕೆಯನ್ನು ಕೊಟ್ಟು ಕರ್ನಾಟಕ ರಾಜ್ಯದವರು ಹಣ ಕೊಡುವುದಾದರೆ, ಕರ್ನಾಟಕ ರಾಜ್ಯಕ್ಕೆ ಬೇಕಾದ ಹೊಸ ರೈಲು ಮಾರ್ಗಗಳನ್ನು ಕೊಡುತ್ತೇವೆಂದು ಅವರು ಹೇಳಿದ್ದಾರೆ. ಆದರೆ ಇದು ಸಾಧ್ಯವಿಲ್ಲ. ಕರ್ನಾಟಕದಿಂದ ಹಣ ಕೊಡಬೇಕಾಗಿಲ್ಲ. ಇದು ಯಾವ ನೀತಿಯೂ ಅಲ್ಲ. ಈ ಬಗ್ಗೆ ತಮ್ಮ ಮೂಲಕ ಮಾನ್ಯ ಮುಖ್ಯ ಮಂತ್ರಿಗಳು ಕೇಂದ್ರಕ್ಕೆ ಒತ್ತಾಯ ಮಾಡಬೇಕೆಂದು ಹೇಳುತ್ತೇನೆ. ನಮಗೆ ಬೇಕಾದ ಎಲ್ಲಾ ರೈಲ್ವೆ ಮಾರ್ಗಗಳನ್ನು ಸಮಗ್ರ ಸವಲತ್ತುಗಳನ್ನು ಪಡೆಯುವ ಬಗ್ಗೆ ಮುಖ್ಯ ಮಂತ್ರಿಗಳು ಯಶಸ್ವಿಯಾಗಬೇಕು. ಈ ಕಡೆ ವಿರೋಧ ಪಕ್ಷದಲ್ಲಿ ಕುಳಿತಿರತಕ್ಕಂಥ ಸದಸ್ಯರೂ ಕೂಡಾ ತಮ್ಮ ಪ್ರಭಾವವನ್ನು ಕೇಂದ್ರ ಮಟ್ಟದಲ್ಲಿ ಬೀರಿ, ವಿಜಯನಗರ ಉಕ್ಕಿನ ಕಾರ್ಖಾನೆಯ ಬಗ್ಗೆ ಮತ್ತು ರಾಜ್ಯದ ರೈಲ್ವೆ ಬಗ್ಗೆ ಬೇಡಿಕೆಗಳನ್ನು ಇಡಲೇ ಬೇಕೆಂಬ ಮಾತನ್ನು ತಮ್ಮ ಗಮನಕ್ಕೆ ತರುತ್ತೇನೆ. ಇನ್ನು ಕೆಲಸದ ವಿಷಯಕ್ಕೆ ಪ್ರಶ್ನೆ ಬಂದಾಗ, ನಮ್ಮಲ್ಲಿ ಉದ್ಯೋಗ ವಿನಿಮಯ ಕೇಂದ್ರಗಳು ಏನಿವೆ ಅಲ್ಲಿ ಒಂದು ನೀತಿ. ಜಾರಿ ಆಗಬೇಕು. ಯಾರು ಮಣ್ಣಿನ ಮಕ್ಕಳು ಇದ್ದಾರೆ. ಈ ರಾಜ್ಯದಲ್ಲಿ ಹುಟ್ಟಿದ ಮಣ್ಣಿನ ಮಕ್ಕಳು ಇದ್ದಾರೆ, ಕನ್ನಡ ಭಾಷೆಯ ಮಕ್ಕಳು ಯಾರಿದ್ದಾರೆ ಅವರಿಗೆ ಮಾತ್ರ ಉದ್ಯೋಗ ವಿನಿಮಯ ಕೇಂದ್ರದಲ್ಲಿ ಹೆಸರನ್ನು ನೋಂದಣಿ ಮಾಡಿಕೊಳ್ಳುವುದಕ್ಕೆ ಅವಕಾಶ ಕಲ್ಪಿಸ ಬೇಕು. ಆದರೆ ಇವತ್ತು ೧೦೦ಕ್ಕೆ ೮೦ ಭಾಗ ಹೊರಗಡೆಯ, ಹೊರಭಾಷೆಯ ಜನಗಳು ಇಲ್ಲಿ ನೋಂದಣಿಮಾಡಿಸಿಕೊಳ್ಳುತ್ತಿದ್ದರೆ. ೨೦ ಭಾಗ ಮಾತ್ರ ಕನ್ನಡದವರು ನೋಂದಣಿ ಮಾಡಿಸಿ ಕೊಳ್ಳುತ್ತಿದ್ದಾರೆ. ಈ ಪರಿಸ್ಥಿತಿಯಲ್ಲಿ ಸಮಗ್ರ ಉದ್ಯೋಗದಲ್ಲಿ ನೂರಕ್ಕೆ ಎಂಬತ್ತರಷ್ಟು ಭಾಗ ಬೇರೆಯವರಿಗೆ ಹೋಗಿದೆಯೆಂದು ಹೇಳುತ್ತೇನೆ. ತಮ್ಮ ಸೂಕ್ತ ಗ್ರಾಮೀಣ ಅಭಿವೃದ್ಧಿ ಬಗ್ಗೆ ಹೇಳುವುದಾದರೆ, ವೈದ್ಯಾಪ್ಯ ವೇತನವನ್ನು ಸರ್ಕಾರದವರು ಕೊಡುತ್ತಿದ್ದಾರೆ. ನಮ್ಮ ಚಾಮರಾಜನಗರ ಕ್ಷೇತ್ರದಲ್ಲಿ ವೈದ್ಯಾಪ್ಯ ವೇತನ ಏನು ಬರುತ್ತಿದೆ ಅದರಲ್ಲಿ ನೂರಕ್ಕೆ ಎಂಬತ್ತು ಭಾಗವನ್ನು ಕಳೆದ ಎಂಟು ತಿಂಗಳಿಂದ ನಿಲ್ಲಿಸಿದ್ದಾರೆ. ಇವರು ಕೊಡತಕ್ಕಂಥದ್ದು ಎಷ್ಟು ಎಂದರೆ ಕೇವಲ ಏವತ್ತು ರೂಪಾಯಿಗಳು. ಒಬ್ಬನಿಗೆ ೫೦ ರೂಪಾಯಿ ಪ್ರಕಾರ ಕೊಡುತ್ತಿದ್ದಾರೆ. ಹರಿಯಾಣ ರಾಜ್ಯದಲ್ಲಿ ನೂರು ರೂಪಾಯಿಗಳನ್ನು ಕೊಡುತ್ತಿದ್ದಾರೆ. ಇವರು ಕೊಡುತ್ತಿರತಕ್ಕ ಕೇವಲ ಇವತ್ತು ರೂಪಾಯಿಗಳನ್ನೂ ಸಹಿತ ಕಳೆದ ಎಂಟು ತಿಂಗಳಿಂದ ಸರಕಾರದಿಂದ ಕೊಡದಿರತಕ್ಕಂಥಾದು ಸರಿಯಾದುದಲ್ಲ. ಸರಕಾರ ಕೂಡಲೇ ಈ ಪ್ರಶ್ನೆಯನ್ನು ಬಗೆಹರಿಸಿ, ಇಡೀ ರಾಜ್ಯದಲ್ಲಿ ಯಾರು ಯಾರಿಗೆ ವೈದ್ಯಾಪ್ಯ ವೇತನ ಕೊಡಬೇಕಾಗಿದೆ ಅವರಿಗೆ ಅದನ್ನು ಕೊಡಬೇಕಾದುದು ಸರ್ಕಾರದ ಕರ್ತವ್ಯ ಎಂದು ಹೇಳುತ್ತೇನೆ. ಕೊನೆಯದಾಗಿದೆ ಒಂದು ಮಾತನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ಇವತ್ತಿನ ದಿವಸ ಒಂದು ಗಹನವಾದ ಗಂಭೀರವಾದ ವಿಚಾರವನ್ನು ಸಭೆಯ ಮುಂದೆ ಎತ್ತಿರುವಾಗ ತಮ್ಮಲ್ಲಿ ಈ ಒಂದು ಮನವಿಯನ್ನು ಮಾಡುತ್ತಿದ್ದೇನೆ. ಚಾಮರಾಜ ನಗರ ತಾಲ್ಲೂಕಿನ ಬಗ್ಗೆ ನಿನ್ನೆ ತಮ್ಮ ಗಮನಕ್ಕೆ ತಂದಿದ್ದೆ. ತಾವೂ, ಈ ಸಭೆಯ ಸಭಾ ನಾಯಕರಾದ ವೀರೇಂದ್ರ ಪಾಟೀಲರು ಹಾಗೂ ವಿರೋಧ ಪಕ್ಷದ ನಾಯಕರು ಅಲ್ಲಿಗೆ ಭೇಟಿ ನೀಡಬೇಕು. ನಾನು ಯಾವುದೇ ಒಂದು ಪಕ್ಷದ ದೃಷ್ಟಿಯಿಂದ ಇದನ್ನು ನೋಡುವುದಿಲ್ಲ. ತಾವು ಎಂಟೂ ಜನ ಆ ಕ್ಷೇತ್ರವನ್ನು ನೋಡಿರಿ. ಆ ಕ್ಷೇತ್ರದ ಪರಿಸ್ಥಿತಿ ಏನಾಗಿದೆ ಗಡಿನಾಡಿನ ತಾಲ್ಲೂಕಿನ ಪರಿಸ್ಥಿತಿ ಎಷ್ಟೊಂದು ಶೋಚನೀಯವಾಗಿದೆ ಎಂಬುದನ್ನು ತಾವು ನೋಡಬೇಕು. ಹಾಗೂ ಅಲ್ಲಿನ ಪರಿಸ್ಥಿತಿಯನ್ನು ಸರಿಪಡಿಸುವುದಕ್ಕೆ ತಾವು ಪ್ರಯತ್ನ ಮಾಡಬೇಕು. ಈ ಸದನ ಮುಗಿದ ನಂತರ ತಾವು ಯಾವುದಾದರೂ ಒಂದು ಕಾಲಾವಕಾಶ ಮಾಡಿಕೊಂಡು ಬಂದು ಆ ಕ್ಷೇತ್ರವನ್ನು ನೋಡಬೇಕು. ಆ ಕ್ಷೇತ್ರ ಸಂಪೂರ್ಣವಾಗಿ ಅತ್ಯಂತ ಶೋಚನೀಯವಾಗಿದೆ. ಆದ್ದರಿಂದ ಆ ಕ್ಷೇತ್ರದ ಬೆಳವಣಿಗೆ ಬಗ್ಗೆ ಗಮನಹರಿಸಬೇಕೆಂದು ನಾನು ತಮ್ಮಲ್ಲಿ ಅತ್ಯಂತ ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತೇನೆ. ಇವತ್ತು ಒಂದು ಸುದ್ದಿವ, ಮಾನ್ಯ ವೀರೇಂದ್ರಪಾಟೀಲರು ರಾಜ್ಯದ ಮುಖ್ಯಮಂತ್ರಿಗಳಾಗಿ ಬಂದಿದ್ದಾರೆ. ಎಂಟೂರು ದಿವಸದಿಂದ ನಾನು ಅವರ ಗಮನ ಸೆಳೆಯುವುದಕ್ಕೆ ಪ್ರಯತ್ನ ಪಡುತ್ತಿದ್ದೇನೆ. ಕೊನೆಯಲ್ಲಿ ನನ್ನ ಚೂರು ಪಾರು ಭಾಷಣ ಕೇಳಲು ಅವರು ಬರುತ್ತಿದ್ದಾರೆ. ಅವರ ಉದ್ದೇಶ ಅರ್ಥವಾಗಲಿಲ್ಲ. ನಿನ್ನೆ ನಾನು ಮಾತನಾಡಿ ಅನೇಕ ವಿಚಾರಗಳನ್ನು ಅವರ ಗಮನಕ್ಕೆ ತಂದಿದ್ದೇನೆ. ಚಾಮರಾಜ ನಗರ ತಾಲ್ಲೂಕಿನ ಬಗ್ಗೆ ಅವರ ಗಮನಕ್ಕೆ ತಂದಿದ್ದೇನೆ. ಚಾಮರಾಜನಗರ ಹಿಂದುಳಿದ ತಾಲ್ಲೂಕು, ಅದರ, ಬಗ್ಗೆ ಹೆಚ್ಚಿಗೆ ಗಮನಹರಿಸಬೇಕು. ಹಾಗೆಯೇ ಪರಿಶಿಷ್ಟ ಜಾತಿಗಳವರ ಕಲ್ಯಾಣದ ಬಗ್ಗೆ ಮೇಲುಕೋಟೆ ಕೆಟ್ಟರ ವಿಚಾರದ ಬಗ್ಗೆ ನಿನ್ನೆ ಮಾತನಾಡಿದ್ದೇನೆ. ಅದರ ಬಗ್ಗೆ ಕೂಡ ಗಮನಹರಿಸಬೇಕು. ಅಲ್ಲದೆ

ಗಡಿಗ್ರಾಮ ಅಭಿವೃದ್ಧಿ ಮಂಡಳಿಯನ್ನು ರಚನೆ ಮಾಡಬೇಕು. ಈ ಬಗ್ಗೆ ಕೆಲವು ದಿವಸಗಳ ಹಿಂದೆ ಮುಖ್ಯ ಮಂತ್ರಿಗಳವರ ಪ್ರೆಸ್ ಸ್ಟೇಟ್‌ಮೆಂಟನ್ನು ನಾವು ನೋಡಿದ್ದೇವೆ. ಅವರು ಈ ಗಡಿ ಗ್ರಾಮ ಅಭಿವೃದ್ಧಿ ಮಂಡಳಿಯ ಬಗ್ಗೆ ತಮ್ಮ ತಕರಾರು ಇಲ್ಲವೆಂದು ಹೇಳಿದ್ದಾರೆ. ಆದ್ದರಿಂದ ಅವರು ಪೂರ್ವಗ್ರಹ ಪೀಡಿತರಾಗದೆ ಈ ಬಗ್ಗೆ ಸಮಗ್ರವಾದ ಚಿಂತನೆಯನ್ನು ಮಾಡುತ್ತಾರೆಂದು ತಿಳಿದುಕೊಂಡಿದ್ದೇನೆ. ಬಡತನದಿಂದ ತೊಳಲಾಡುತ್ತಿರುವ ಹಾಗೂ ಹಿಂದುಳಿತಕ್ಕ ಕ್ಷೇತ್ರವಾದ ನನ್ನ ಚಾಮರಾಜನಗರ ಕ್ಷೇತ್ರದ ಕಡೆ ಶ್ರೀ ವೀರೇಂದ್ರಪಾಟೀಲರು ಸಮಗ್ರವಾಗಿ ಗಮನ ಹರಿಸಬೇಕೆಂದು ಕೇಳಿಕೊಳ್ಳುತ್ತೇನೆ. ಈ ಸಭೆಯಿಂ ಮುಗಿದ ನಂತರ ಅವರು ದಯಮಾಡಿ ನನ್ನ ಕ್ಷೇತ್ರಕ್ಕೆ ಭೇಟಿ ಕೊಡಬೇಕೆಂದು ಪ್ರಾರ್ಥಿಸುತ್ತೇವೆ. ಅವರು ಆ ಕ್ಷೇತ್ರವನ್ನು ನೋಡಬೇಕು. ಅಲ್ಲಿ ಬದುಕುತ್ತಿರುವ ಜನತೆಯ ಸ್ಥಿತಿಗತಿಗಳನ್ನು ನೋಡಬೇಕು. ಅವರ ಸ್ಥಿತಿ ಶೋಚನಿಯವಾಗಿಯೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಅಧ್ಯಕ್ಷರೂ ಸಹ ಬರಬೇಕು ಎಂದು ತಮಗೂ ನಾನು ಆಹ್ವಾನವನ್ನು ಕೊಟ್ಟಿದ್ದೇನೆ.

ಇನ್ನು ಹೊರನಾಡ ಕನ್ನಡಿಗರ ಸಂಘದ ಬಗ್ಗೆ ಒಂದೆರಡು ಮಾತುಗಳನ್ನು ಹೇಳುತ್ತೇನೆ. ಹೊರನಾಡ ಕನ್ನಡಿಗರ ಸಂಘವು ಅಂಡಮಾನ್ ನಿಕೊಬಾರ್‌ನಲ್ಲಿದೆ. ನಮ್ಮವರು ಅಲ್ಲಿಗೆ ಪ್ರವಾಸ ಹೋದಾಗ ಅವರು ನನ್ನನ್ನು ಕರೆಸಿ ಹಾರಕುತ್ತಾರೆ. ಅನೇಕ ಸಲ ಅವರು ಸರ್ಕಾರಕ್ಕೆ ಮನವಿಯನ್ನು ಸಲ್ಲಿಸಿದ್ದಾರೆ. ಸರ್ಕಾರದ ಮೂಲಕ ಸ್ವಲ್ಪ ಹಣವನ್ನು ಸಹಾಯಮಾಡಿ ಎಂದು ಅವರು ಕೇಳುತ್ತಿದ್ದಾರೆ. ಆದ್ದರಿಂದ ಹೊರ ನಾಡ ಕನ್ನಡಿಗರ ಸಂಘಗಳು ಎಲ್ಲೆಲ್ಲಿವೆ. ಅವುಗಳಿಗೆ ಎಲ್ಲಾ ರೀತಿಯ ಪ್ರೋತ್ಸಹವನ್ನು ಕೊಡುವ ಉದ್ದೇಶದಿಂದ ಸರ್ಕಾರವು ಒಂದು ನೀತಿಯನ್ನು ತಯಾರುಮಾಡಬೇಕು. ಹಾಗೂ ಆ ಸಂಘಗಳಿಗೆ ಹಣವನ್ನು ಕೊಡತಕ್ಕ ಸಂಪ್ರದಾಯವನ್ನು ತಾವು ಪ್ರಾರಂಭ ಮಾಡಬೇಕೆಂದು ನಾನು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಶ್ರೀ ಹನುಮಂತಯ್ಯನವರ ಬಗ್ಗೆ ನಾನು ಹೇಳಿದ ಸಲಹೆಯನ್ನು ಜಾರಿಗೆತರಬೇಕು. ಶ್ರೀ ಹನುಮಂತಯ್ಯನವರ ಪ್ರತಿಮೆ ವಿಧಾನ ಸೌಧದ ಮುಂದೆ ಏನು ಇದೆ ಅದು ಸರಿಯಿಲ್ಲ. ಅದನ್ನು ಬದಲಾವಣೆ ಮಾಡಬೇಕೆಂದು ಹಿಂದಿನ ಸರ್ಕಾರಕ್ಕೆ ಮನವಿ ಮಾಡಿದ್ದೆವು. ಅದರ ಮುಂದೆ ಮಾಜಿ ಮೇಯರ್‌ಗಳು ಸತ್ಯಾಗ್ರಹ ಮಾಡಿದರು. ಆದರೆ ಬೇರೆ ಪ್ರತಿಮೆ ಇನ್ನೂ ಬಂದಿಲ್ಲ. ತಾವು ದಯವಿಟ್ಟು ಆ ಪ್ರತಿಮೆಯನ್ನು ಬೇಗನೆ ಬದಲಾವಣೆ ಮಾಡಬೇಕು. ನಾನು ಹಿಂದೆ ಗಲಾಟೆ ಮಾಡಿದ್ದಿದ್ದರೆ ಗೋಪಾಲ ಗೌಡ ವೃತ್ತ ಎಂದು ಹೆಸರಿಡುತ್ತಿರಲಿಲ್ಲ. ಶಾಂತಿವೇರಿ ಗೋಪಾಲಗೌಡರು ಕರ್ನಾಟಕ ಏಕೀಕರಣಕ್ಕೆ ದುಡಿದಿದ್ದಾರೆ. ಅವರ ಸ್ಮಾರಕವಾಗಿ, ಒಂದು ವೃತ್ತಕ್ಕೆ ಅವರ ಹೆಸರನ್ನು ಇಡಬೇಕೆಂದು ನಾನು ಗಲಾಟೆ ಮಾಡಿದ ಕಾರಣ ಈ ದಿವಸ ಗೋಪಲಗೌಡ ವೃತ್ತವೆಂಬ ಹೆಸರನ್ನು ವಿಧಾನ ಸೌಧದ ಮುಂದೆ ಇರುವ ವೃತ್ತಕ್ಕೆ ಇಡಲಾಗಿದೆ. ನಾನು ಹೇಳುವುದು ವೀರೇಂದ್ರಪಾಟೆ ಲರಿಗೆ ಕೇಳುತ್ತಿದೆಯೊ ಇಲ್ಲವೋ ಗೊತ್ತಿಲ್ಲ. ನಾನು ಹೇಳುತ್ತಿರುವುದು ಒಂದು ರೀತಿ ಗೋರ್ಕಲ್ಲ ಮೇಲೆ ಮಳೆಯು ಸುರಿಯುತ್ತಿದ್ದಹಾಗೆ ಆಗುತ್ತಿದೆಯೋ ಏನೂ ನನಗೆ ಗೊತ್ತಿಲ್ಲ. ೨೦ ವರ್ಷಗಳು ಆದ ಮೇಲೆ ನಾನು ಅವರು ಭೇಟಿ ಯಾಗುತ್ತಿದ್ದೇವೆ. ನನಗೆ ಬಹಳ ಸಂತೋಷವಾಗಿದೆ. ನಾನು ಹೇಳಿದಂತಹ ಕೆಲವು ವಿಚಾರಗಳನ್ನು ಶ್ರೀ ವೀರೇಂದ್ರಪಾಟೀಲರು ಗಮನಿಸಿ ಕ್ರಮ ಕೈಗೊಳ್ಳುತ್ತಾರೆಂದು ಹಾಗೂ ನನ್ನ ಸ್ವೀಕಾರವನ್ನು ಒಪ್ಪಿಕೊಂಡು ನನ್ನ ಕ್ಷೇತ್ರಕ್ಕೆ ಭೇಟಿ ನೀಡುತ್ತಾರೆಂದು ತಿಳಿದುಕೊಂಡಿದ್ದೇನೆ. ಸಮಯ ಸಾಲದ ಕಾರಣ ನನಗೆ ಬಹಳ ನೋವಾಗಿದೆ. ಇಷ್ಟು ಹೇಳಿ ನನ್ನ ಮಾತನ್ನು ಮುಂಗಿಸುತ್ತೇನೆ.

† ಶ್ರೀಮತಿ ಚಂದ್ರಪ್ರಭಾ ಅರಸು (ಹುಣಸೂರು).—ಮಾನ್ಯ ಅಧ್ಯಕ್ಷರೆ, ತಾವು ನನಗೆ ಮಾತನಾಡಲು ಅವಕಾಶವನ್ನು ಮಾಡಿಕೊಟ್ಟಿದ್ದಕ್ಕಾಗಿ ತಮಗೆ ವಂದನೆಗಳು. ಮಾನ್ಯ ವಿರೋಧಪಕ್ಷದ ನಾಯಕರುಗಳ ಹಾಗೂ ಶ್ರೀ ವಾಟಾಳ್ ನಾಗರಾಜು ಅವರ ಆರ್ಭಟದ ನಡುವೆ ನನಗೆ ಸ್ವಲ್ಪ ಸಮಯ ಅವಕಾಶ ಮಾಡಿಕೊಟ್ಟಿರುವುದಕ್ಕೆ ಮತ್ತೊಮ್ಮೆ ತಮಗೆ ನನ್ನ ವಂದನೆಗಳು. ರಾಜ್ಯಪಾಲರು ನಮ್ಮನ್ನು ಉದ್ದೇಶಿಸಿ ಭಾಷಣ ಮಾಡಿದ್ದಾರೆ ನಮ್ಮ ಸರ್ಕಾರ ಪ್ರಜಾಸತ್ತೆಯ ರೀತಿಯಲ್ಲಿ ಚುನಾಯಿತಗೊಂಡಿದೆ. ಈಗ ಕೇಂದ್ರದಲ್ಲಿ ರಾಷ್ಟ್ರೀಯ ರಂಗದ ಸರ್ಕಾರ ಅಸ್ತಿತ್ವಕ್ಕೆ ಬಂದಿದೆ. ಅಭಿವೃದ್ಧಿ ಕಾರ್ಯಗಳ ಬಗ್ಗೆ ರಾಷ್ಟ್ರೀಯ ಮತ್ತು ರಾಜ್ಯ ಸರ್ಕಾರಗಳು ಸಹ ಚಿಂತನೆಯನ್ನು ಮಾಡಬೇಕಾಗುತ್ತದೆ. ನಮ್ಮ ಫೆಡರಲ್ ಸಿಸ್ಟಮ್ ಏನು ಇದೆ. ಅದರಂತೆ ಸ್ವಾಯತ್ತತೆ ಪಡೆದ ರಾಜ್ಯ ಸರ್ಕಾರಗಳು ಅದನ್ನು ಸರಿಯಾದ ರೀತಿಯಲ್ಲಿ ಉಪಯೋಗ ಮಾಡಿಕೊಂಡು ಕೇಂದ್ರ ಸರ್ಕಾರದ ಜೊತೆಯೆಲ್ಲ ವ್ಯವಹಾರ ಮಾಡಿ ನಮ್ಮ ನಾಡಿನ ಜನತೆಗೆ ಆವಶ್ಯಕವಾದ ಸೌಕರ್ಯಗಳನ್ನು ಕಲ್ಪಿಸಿಕೊಡುವಲ್ಲಿ ನಾವು ಅವರಿಗೆ ವಿಶ್ವಾಸಯುತವಾದ ಸಹಕಾರಯುತವಾದ ಸ್ನೇಹಯುತವಾದ ಸಂಪರ್ಕವನ್ನು ಕೇಂದ್ರದ ಜೊತೆ ಇಟ್ಟುಕೊಳ್ಳುತ್ತೇವೆಂದು ರಾಜ್ಯಪಾಲರು ಏನು ತಿಳಿಸಿದ್ದಾರೆ, ಅದನ್ನು ಸ್ವಾಗತಮಾಡುತ್ತೇನೆ. ರಾಜಕೀಯ ಪಕ್ಷಗಳ ಗುರಿ ಮತ್ತು ಅವರವರ ಪಾಲಿಸಿ ಅಂಡ್ ಪ್ರೋಗ್ರಾಮ್ ಮೇಲೆ ತಮ್ಮ ತಮ್ಮ ಚಿಂತನೆಯನ್ನು ಇಟ್ಟುಕೊಂಡಿರುತ್ತಾರೆ.

ನಮ್ಮ ನಾಡಿನ ರೈತರ ಹಾಗೂ ಬಡಜನರ ಹಿತವನ್ನು ಕಾಪಾಡುವುದರಲ್ಲಿ ಹಾಗೂ ಸರ್ವತೋಮುಖವಾದ ಏಳಿಗೆಯನ್ನು ಬಯಸುವ ಬಗ್ಗೆ ನಾವು ಹೆಚ್ಚಿನ ಆದ್ಯತೆಯನ್ನು ಕೊಡುತ್ತೇವೆಂಬ ಮಾತನ್ನು ಸಹ ಇದರಲ್ಲಿ ಹೇಳಿದ್ದಾರೆ.

೧೧–೦೦ ಎ. ಎಂ.

ಹಿಂದೆ ಇದ್ದಂತಹ ಸರ್ಕಾರ ಇದಕ್ಕಾಗಿ ಒಂದು ಥಿಂಕ್ ಟ್ಯಾಂಕ್ ಅಂದರೆ ಚಿಂತನೆ ಚಿಲುಮೆಯನ್ನು ಸ್ಥಾಪನೆ ಮಾಡಿದ್ದರು. ಅವರು ಕೆಲವೊಂದು ಕಾರ್ಯಕ್ರಮಗಳನ್ನು ಸದ್ಭಾವನೆಯಿಂದ ಯೋಜನೆ ಮಾಡಿದಂತಹ ಸಂದರ್ಭದಲ್ಲಿ ಥಿಂಕ್ ಟ್ಯಾಂಕ್‌ನ ಕಾರ್ಯಕ್ರಮಗಳನ್ನು ಸರ್ಕಾರದವರು ಹಾಕಿಕೊಂಡರು. ನಮ್ಮ ರಾಜ್ಯದ ಹಿತವನ್ನು ಕಾಪಾಡಲು ಹೊರರಾಜ್ಯಗಳಿಂದ ವಿಜ್ಞಾನಿಗಳನ್ನು, ತಂತ್ರಜ್ಞರನ್ನು ಕರೆಸಿ ಕೊಂಡರು. ನಮ್ಮ ರಾಜ್ಯದ ಒಡ ಜನರ ಅಗುಹೋಗುಗಳ ಬಗ್ಗೆ ಅವರಿಗೆ ಬೇಕಾದಂತಹ ಕಾರ್ಯಕ್ರಮಗಳ ಬಗ್ಗೆ ಚಿಂತನೆ ಮಾಡುವುದಕ್ಕೆ ಹೊರರಾಜ್ಯಗಳಿಂದ ಬೇರೆ ಜನರನ್ನು ಕರೆಸಿಕೊಳ್ಳುವಂತಹ ಅವಶ್ಯಕತೆ ಇರಲಿಲ್ಲವೆಂದು ನಾನು ಭಾವಿಸುತ್ತೇನೆ. ಈ ರಾಜ್ಯದ ಬೊಕ್ಕಸದಿಂದ ಅವರಿಗೆ ಹಣದ ಖರ್ಚು ವೆಚ್ಚ ಭರಿಸಿದರು. ನಮ್ಮ ರಾಜ್ಯದ ರೈತರ ನಮ್ಮ ರಾಜ್ಯದ ಬಡ ಬೋರೇಗೌಡನ ಹಾಗೂ ಹಳ್ಳಿಯಲ್ಲಿ ವಾಸ ಮಾಡತಕ್ಕಂಥ ನಮ್ಮ ಜನತೆಯನ್ನು ಹಿತವನ್ನು ಕಾಪಾಡುವುದಕ್ಕೆ ಹಿಂದಿನ ಸರ್ಕಾರ ಎಲ್ಲಿಯವರೆಗೆ ಹೋಯಿತು ಎನ್ನುವುದನ್ನು ನಾವು ನೀವು ಎಲ್ಲರೂ ಪರಾಮರ್ಶಿಸಬೇಕಿದೆಂದು ನನಗನಿಸುತ್ತದೆ. ನಮ್ಮ ದೇಶದಲ್ಲಿ, ಅಂದರೆ ನಮ್ಮ ರಾಜ್ಯದಲ್ಲಿ ಎಂತಹ ವಿಜ್ಞಾನಿಗಳು, ಎಂತಹ ತಂತ್ರಜ್ಞರು ಇದ್ದಾರೆಂದರೆ ಅದಕ್ಕೆ ನಾನೊಂದು ಉದಾಹರಣೆಯನ್ನು ಕೊಡುವುದಾದರೆ, ಸರ್ ಎಂ. ವಿಶ್ವೇಶ್ವರಯ್ಯನವರು ಹುಟ್ಟಿ ಬೆಳೆದಂತಹ ನಾಡು ಇದು. ಇಲ್ಲಿ ಇಲ್ಲದ ತಂತ್ರಜ್ಞರು ಇಲ್ಲಿ ಇಲ್ಲದ ವಿಜ್ಞಾನಿಗಳು ಹೊರ ರಾಜ್ಯದಲ್ಲಿ ಇದ್ದಾರೆಯೇ ? ನಮ್ಮ ರಾಜ್ಯದ ಜನತೆಯ ಹಿತಕ್ಕೆ ಹೊರರಾಜ್ಯಗಳಿಂದ ಜನರನ್ನು ಕರೆಸ ತಕ್ಕಂಥ ಅವಶ್ಯಕತೆ ಇರಲಿಲ್ಲವೆಂದು ನನಗನಿಸುತ್ತದೆ. ಬೇರೆ ರಾಜ್ಯಗಳಿಂದ ದುಬಾರಿ ವೆಚ್ಚದಲ್ಲಿ ವಿಜ್ಞಾನಿಗಳನ್ನು ಕರೆಸಿಕೊಂಡು ಅವರಿಗೆ ಹಣ ಖರ್ಚು ಮಾಡಿ ಅವರು ಮಾಡಿದಂತಹ ಚಿಂತನೆ ಯಾವ ಮಟ್ಟಕ್ಕೆ ಹೋಯಿತು ಎನ್ನುವುದನ್ನು ಈಗಾಗಲೇ ಎಲ್ಲರೂ ತಿಳಿದುಕೊಂಡಿದ್ದಾರೆ. ಹಿಂದೆ ನಮ್ಮ ಪಕ್ಷ ಅಧಿಕಾರದಲ್ಲಿ ಇದ್ದಂತಹ ಸಂದರ್ಭದಲ್ಲಿ ಸಾಮಾನ್ಯ ಜನರ ಹಿತ ಪೂರೈಸುವಂತಹ ಕೆಲವು ಒಳ್ಳೆಯ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೆವು. ಉದಾಹರಣೆಗೆ ಹೇಳುವುದಾದರೆ, ಜನತಾ ಮನೆ ಅಥವಾ ಹಳ್ಳಿಗಾಡು ಪ್ರದೇಶಗಳಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ ನಮ್ಮ ಇಲ್ಲದವರಿಗೆ ಮನೆ ಕಟ್ಟಿಸಿಕೊಡುವ ಕಾರ್ಯಕ್ರಮ ಅಥವಾ ಕನಿಷ್ಟ ಅವರಿಗೆ ಬೇಕಾದಂತಹ ಸೌಲಭ್ಯಗಳನ್ನು ಅವರಿಗೆ ಬೇಕಾದಂತಹ ಸಾಮಗ್ರಿಗಳನ್ನು ಒದಗಿಸತಕ್ಕಂಥ ಕಾರ್ಯಕ್ರಮ, ಮನೆಗಳನ್ನು ಕಟ್ಟಿಸಿಕೊಡತಕ್ಕಂಥ ಕಾರ್ಯಕ್ರಮವೇದರೆ, ಒಂದು ವರ್ಷದಲ್ಲಿ ಒಂದು ತಾಲ್ಲೂಕಿಗೆ ಒಂದೂ ಸಾವಿರ ಅಥವಾ ಸಾವಿರದೈನೂರೂ ಮನೆಗಳನ್ನು ಕಟ್ಟಿಸಿಕೊಡುವ ಒಂದು ನಿರ್ದಿಷ್ಟ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೆವು. ಆಗ ಒಂದು ಹಳ್ಳಿಗೆ ಐದು, ಹತ್ತು ಮನೆಗಳು ಪ್ರತಿವರ್ಷ ಕೊಡತಕ್ಕಂಥ ಕೆಲಸ ಆಗುತ್ತಿತ್ತು. ಆದರೆ ಕಳೆದ ಕೆಲವು ವರ್ಷಗಳ ಹಿಂದೆ ಜನತೆಯ ಹೆಸರಿನಲ್ಲಿ ಚುನಾಯಿತವಾಗಿ ಬಂದ ಜನತಾ ಸರ್ಕಾರ ಜನತಾ ಮನೆಗಳನ್ನು ಕನಿಷ್ಟ ಒಂದು ಹಳ್ಳಿಗೆ ಕೇವಲ ೫ ಮನೆಗಳು ಹೋಗಲಿ ಒಂದು ಮಂಡಲ ಪಂಚಾಯಿತಿಗೆ ಕೇವಲ ೫ ಜನತಾ ಮನೆಗಳು ಕಟ್ಟಿಸಿಕೊಡುವ ಪ್ರಯತ್ನವನ್ನು ಸಹ ಮಾಡಲಿಲ್ಲ. ಇವತ್ತಿನ ಪರಿಸ್ಥಿತಿಯಲ್ಲಿ ಮಂಡಲ ಪಂಚಾಯಿತಿಯಿಂದ ಒಂದು ಹಳ್ಳಿಗೆ ಒಂದು ವರ್ಷದಲ್ಲಿ ಒಂದು ಮನೆ ಬರುವಂತಹ ಸಾಧ್ಯತೆ ಕೂಡ ಇಲ್ಲ. ಒಂದು ಹಳ್ಳಿಯಲ್ಲಿ ಮನೆ ಕಟ್ಟಲು ಹೆಂಚು ಸಹ ಕೊಡುವುದಕ್ಕೆ ಸಾಧ್ಯವಿಲ್ಲದ ಪರಿಸ್ಥಿತಿಯಲ್ಲಿ ಮಂಡಲ ಪಂಚಾಯಿತಿಗಳಿವೆ, ಎನ್ನುವುದನ್ನು ನಾವು ಯೋಚನೆ ಮಾಡಬೇಕಾದಂತಹ ಪರಿಸ್ಥಿತಿ ಇದೆ. ಜನತಾ ಮನೆಗಳನ್ನು ಕಟ್ಟಿಸಿ ಕೊಡುವ ಕಾರ್ಯಕ್ರಮ ಸಂಪೂರ್ಣವಾಗಿ ನಿಂತು ಹೋಗಿದೆ. ಈ ಒಂದು ಕಾರ್ಯಕ್ರಮ ಸಂಪೂರ್ಣವಾಗಿ ಸ್ಥಗಿತಗೊಂಡಿದೆ ಎಂದು ಹೇಳಿದರೂ ಅದು ತಪ್ಪಾಗುವುದಿಲ್ಲ. ನಮ್ಮ ಸರ್ಕಾರ ಅಧಿಕಾರಕ್ಕೆ ಬಂದಿದೆ ಈ ಕಾರ್ಯಕ್ರಮಗಳನ್ನು ಇನ್ನು ಮುಂದೆಯಾದರೂ ಜಾರಿಗೆ ಕೊಡುವುದಕ್ಕೆ ಪ್ರಯತ್ನ ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಹಿಂದಿನ ಸರ್ಕಾರಕ್ಕೆ ಆಡಿದಂತೆ ಮಾಡುವುದು ಹಾಗೂ ಮಾಡಿದ್ದನ್ನು ಹೇಳುವ ಧೈರ್ಯವನ್ನು ಏತಕ್ಕೆ ಕಳೆದುಕೊಂಡರು ಎನ್ನುವುದಕ್ಕೆ ನಾನೊಂದು ಉದಾಹರಣೆಯನ್ನು ಕೊಡಬೇಕಾಗುತ್ತದೆ. ಅವರ ಚುನಾವಣೆ ಪ್ರಣಾಳಿಕೆಯಲ್ಲಿ ಕ್ಯಾಪಿಟೇಷನ್ ಫೀಜು ರದ್ದು ಮಾಡುತ್ತೇವೆಂದು ಹೇಳಿ ಸಾರ್ವಜನಿಕರ ಗಮನ ಸೆಳೆದರು. ಶಿಕ್ಷಣದಲ್ಲಿ ಪೆಟ್ಟು ತಿಂದಂತಹ ತಂದೆ ತಾಯಿಗಳ ಮನಸ್ಸಿನಲ್ಲಿ ಒಂದು ರೀತಿಯಾದಂತಹ ಸಮಸ್ಯೆ ಏನಿತ್ತು, ಆ ಸಮಸ್ಯೆಯನ್ನು ಬಗೆಹರಿಸುತ್ತೇವೆಂದು ಹೇಳಿ ಅವರ ಮನಸ್ಸನ್ನು ಸೆಳೆದರೂ. ಆದರೆ ಇವರು ಹೇಳಿದಂತೆ ಮಾಡದೆ ಹೇಳಿದ್ದು ಒಂದೂ ಮಾಡಿದ್ದು ಮತ್ತೊಂದು ಎಂಬಂತೆ ಆಯಿತು. ಕ್ಯಾಪಿಟೇಷನ್ ಫೀಜು

ರದ್ದು ಮಾಡಬೇಕೆಂದು ಹೇಳಿದ್ದರಲ್ಲಿ ನಮ್ಮ ಅನೇಕರ ಪಾಲು ಇದೆ. ಅನೇಕ ಸಚಿವರ ಪಾಲು ಇದೆ. ಶಾಸಕರ ಪಾಲು ಇದೆ. ನಾವು ಆಗ ಒತ್ತಡ ತಂದಾಗ ಅವರು ಬೇರೆ ರೀತಿಯಲ್ಲಿ ಒಂದು ಕಾರ್ಯಕ್ರಮವನ್ನು ಹಾಕಿಕೊಂಡರು. ಶಿಕ್ಷಣ ನೀತಿ ಸರಿಯಾದ ರೀತಿಯಲ್ಲಿ ಇರಬೇಕು. ಅದಕ್ಕೊಂದು ಪರಿಪಕ್ವವಾದ ಕಾರ್ಯಕಲ್ಪನೀಡಿ ಎಂದು ನಾವು ಹೇಳಿದರೆ ಆಗ ಅವರು ಅದಕ್ಕೆ ಒಂದು ಹೊಸ ಸ್ವರೂಪವನ್ನೇ ಕೊಟ್ಟರು. ಅದೇನೆಂದರೆ ಒಂದೊಂದು ಜಿಲ್ಲೆಗೆ ಒಂದೊಂದು ಮೆಡಿಕಲ್ ಕಾಲೇಜು, ಒಂದೊಂದು ಜಾತಿಗೂ ಜಾತಿಯ ಹೆಸರಿನಲ್ಲಿ ಮೆಡಿಕಲ್ ಕಾಲೇಜು ಕೊಟ್ಟು ಮೆಡಿಕಲ್ ಕಾಲೇಜುಗಳನ್ನು ಇಂಜಿನಿಯರಿಂಗ್ ಕಾಲೇಜುಗಳನ್ನು ಮಾರಾಟಕ್ಕೆ ಇಟ್ಟರು. ಇದನ್ನೆ ಕರ್ನಾಟಕ ರಾಜ್ಯದ ಜನತೆ ನೋಡಿದ್ದಾರೆ. ಇದರಿಂದ ನಿರುದ್ಯೋಗ ಸಮಸ್ಯೆ ಹೇರಳವಾಯಿತು. ನಮ್ಮ ರಾಜ್ಯದಲ್ಲಿ ಈಗಾಗಲೇ ಸಹಸ್ರಾರು ಖಾಲಿ ಹುದ್ದೆಗಳು ಇವೆ. ಇದರಿಂದ ನಿರುದ್ಯೋಗ ಸಮಸ್ಯೆಯುಂಟಾಗುತ್ತದೆ. ಅನೇಕ ಹುದ್ದೆಗಳು ಅನೇಕ ಕ್ಷೇತ್ರಗಳಲ್ಲಿ ಖಾಲಿ ಇವೆ, ಹಿಂದಿನ ಸರ್ಕಾರವು, ಪ ನೆಗೆ ಒಂದು ಉದ್ಯೋಗವನ್ನು ಕೊಡುತ್ತೇವೆಂದು ಭರವಸೆಯನ್ನು ಕೊಟ್ಟು ಅದನ್ನು ಈಡೇರಿಸಲಾಗದೆ ವಿಫಲವಾಯಿತು. ನಮ್ಮ ಕರ್ನಾಟಕ ರಾಜ್ಯದಲ್ಲಿ ಬರಗಾಲದ ಬವಣೆಯು ಸತತವಾಗಿ ೪ ವರ್ಷಗಳ ಕಾಲ ಕರ್ನಾಟಕದ ಜನತೆಯನ್ನು ಬಡ ರೈತರುಗಳನ್ನು ತತ್ತರಿಸುವ ರೀತಿಯಲ್ಲಿ ಮಾಡಿತು. ಅದಕ್ಕೆ ಪರಿಹಾರವನ್ನು ಒದಗಿಸಿಕೊಡತಕ್ಕ ಕೆಲಸವನ್ನು ಮಾಡುವುದಕ್ಕಾಗಿ ಕೇಂದ್ರ ಸರ್ಕಾರವು ಅನೇಕ ರೀತಿಯಲ್ಲಿ ರಾಜ್ಯ ಸರ್ಕಾರಕ್ಕೆ ಹಣ ಸಹಾಯ ಮಾಡಿತು. ಆ ಸಮಯದಲ್ಲಿ ನಾವು ಕೂಡ ಕೇಂದ್ರ ಸರ್ಕಾರದೊಡನೆ ಮಾತನಾಡಿ ಹೆಚ್ಚಿನ ರೀತಿಯಲ್ಲಿ ಧನ ಸಹಾಯ ಮಾಡುವುದಕ್ಕೆ ಧ್ವನಿಯನ್ನು ಕೂಡಿಸಿದ್ದೆವು. ಆ ಹಣದಿಂದ ಬಡ ಜನರ ಕಷ್ಟ ಪರಿಹಾರವಾಗಲಿಲ್ಲ, ಕೇವಲ ಸರ್ಕಾರದ ಯಂತ್ರದ ಅಧಿಕಾರಿಗಳು ಮತ್ತು ಕೆಲವೊಂದು ಮಟ್ಟಿದ ರಾಜಕಾರಣಿಗಳ ಒರಗಾಲವನ್ನು ಪರಿಹಾರ ಮಾಡಿದಂತಾಯಿತೆಂಬುದನ್ನು ಇಲ್ಲಿ ವಿಶೇಷವಾಗಿ ವಿಷಾದದಿಂದ ಹೇಳಬೇಕಾಗುತ್ತದೆ, ಮತ್ತು ಮಂಡಲ ಪಂಚಾಯಿತಿಗಳನ್ನು ಹಾಗೂ ಜಿಲ್ಲಾಪರಿಷತ್ತುಗಳನ್ನು ನಮ್ಮ ರಾಜ್ಯದಲ್ಲಿ ಸ್ಥಾಪನೆಮಾಡಿದಂಥ ಸಂದರ್ಭದಲ್ಲಿ ಸಮಾಜವಾದದ ತಿರುಳಿನ ಮಾತನಾಡಿ, ಹಿರಿಯ ರಾಷ್ಟ್ರಪಿತ ಜಯಪ್ರಕಾಶ್ ನಾರಾಯಣ್ ಅವರ ಹೆಸರಿನಲ್ಲಿ ಮಾಡಿದಂಥ ನೀತಿ ಕಾರ್ಯಕ್ರಮಗಳನ್ನು ಏನೂ ಅಳವಡಿಸಿದರು, ಅವುಗಳು ಪ್ರಜಾತಂತ್ರ ವ್ಯವಸ್ಥೆಯಲ್ಲಿ ಸರಿಯಾಗಿ ಕಾರ್ಯರೂಪಕ್ಕೆ ಬರಬೇಕು. ಗ್ರಾಮಾಂತರ ಪ್ರದೇಶದಲ್ಲಿ ನವ ನಾಡಿನ ಜನತೆಗೆ ಸೌಕರ್ಯಗಳು ಮತ್ತು ಸೌಲಭ್ಯಗಳನ್ನು ಕೊಡಿಸುವುದಕ್ಕಾಗಿ ಪಂಚಾಯತ್ ರಾಜ್ ವ್ಯವಸ್ಥೆಯನ್ನು ಜಾರಿಗೆ ತರಬೇಕೆಂದು ಮಾಡಲಾಗಿತ್ತು. ಅಧಿಕಾರ ವಿಕೇಂದ್ರೀಕರಣದ ಬಗ್ಗೆ ಮಾತನಾಡಿದಂಥ ಹಿಂದಿನ ಸರ್ಕಾರ, ಪಂಚಾಯತ್ ರಾಜ್ ವ್ಯವಸ್ಥೆಗೆ ಸರಿಯಾದ ಮಾರ್ಗದರ್ಶನ, ನಿರ್ದಿಷ್ಟವಾದ ಜವಾಬ್ದಾರಿಗಳ ಬಗ್ಗೆ ಅರಿವು ಮಾಡಿಕೊಡಲಿಲ್ಲ. ಅಲ್ಲಿ ಯಾವ ರೀತಿ ಕೆಲಸ ಮಾಡಿಸಬೇಕು, ಅವರುಗಳಿಗೆ ಯಾವ ರೀತಿಯ ಹೊಣೆಗಾರಿಕೆ ಇದೆ, ಹಣಕಾಸಿನ ಸಂಪನ್ಮೂಲಗಳನ್ನು ಒದಗಿಸಿಕೊಳ್ಳುವ ಅವರ ಕಾರ್ಯವ್ಯಾಪ್ತಿ ಏನು ಎಂದು ಸವಿವರವಾಗಿ ಹೇಳಿಲ್ಲ, ಏಕೆಂದರೆ, ಬರಗಾಲದ ಸಮಯದಲ್ಲಿ ಸಣ್ಣ ನೀರಾವರಿ ನಾಲೆಗಳನ್ನು, ಚಾನಲ್‌ಗಳನ್ನು ಮಾಡುವುದಕ್ಕಾಗಿ ಮಂಡಲ ಪಂಚಾಯಿತಿಗಳಲ್ಲಿ ಮತ್ತು ಜಿಲ್ಲಾಪರಿಷತ್ತುಗಳಲ್ಲಿ ಸರಿಯಾದ ರೀತಿಯ ವ್ಯವಸ್ಥೆ ಇರಲಿಲ್ಲ. ಇದರ ಬಗ್ಗೆ ಇಂಜಿನೀಯರ್‌ಗಳನ್ನು ಕೇಳಿದರೆ, ಮಂಡಲ ಪಂಚಾಯಿತಿಗೆ ಕೇಳಬೇಕೆಂದು ಹೇಳುತ್ತಾರೆ. ಮಂಡಲ ಪಂಚಾಯಿತಿಗೆ ಕೇಳಿದರೆ, ಜಿಲ್ಲಾಪರಿಷತ್ತಿನವರಿಗೆ ಕೇಳಬೇಕೆಂದು ಹೇಳುತ್ತಾರೆ. ಜಿಲ್ಲಾಪರಿಷತ್ತಿನವರಿಗೆ ಕೇಳಿದರೆ ಅದು ನಮ್ಮ ವ್ಯಾಪ್ತಿಗೆ ಬರುವುದಿಲ್ಲ ಪಿ.ಡಬ್ಲ್ಯೂ.ಡಿ.ಯನ್ನು ಕೇಳಬೇಕೆಂದು ಹೇಳುತ್ತಾರೆ. ಈ ರೀತಿಯ ಒಂದು ಗೊಂದಲಮಯ ಸನ್ನಿವೇಶಗಳನ್ನು ಸೃಷ್ಟಿ ಮಾಡಿ ಪಂಚಾಯತ್ ರಾಜ್ ವ್ಯವಸ್ಥೆಯು ಅವ್ಯವಸ್ಥೆಯಾಗಿದೆ.

ಆದುದರಿಂದ ಈ ಪಂಚಾಯತ್ ರಾಜ್ ವ್ಯವಸ್ಥೆಯನ್ನು ಸರಿಯಾದ ರೀತಿಯಲ್ಲಿ ವಿಂಗಡಣೆ ಮಾಡಿ ಪುನರ್ ವಿಮರ್ಶೆ ಮಾಡಬೇಕು. ಜಿಲ್ಲಾಪರಿಷತ್ತಿನ ಮತ್ತು ಮಂಡಲ ಪಂಚಾಯಿತಿಗಳ ಕಾರ್ಯವ್ಯಾಪ್ತಿಯ ಬಗ್ಗೆ ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಪ್ರಸ್ತಾಪಿಸಲಾಗಿದೆ. ಇದು ಬಹಳ ಸ್ವಾಗತಾರ್ಹವಾಗಿದೆ. ಇದನ್ನು ಅತಿ ಶೀಘ್ರವಾಗಿ ಮಾಡಿದರೆ ಒಳ್ಳೆಯದು. ಅಲ್ಲಿ ಕಾರ್ಯಕ್ರಮಗಳನ್ನು ಸಕ್ರೀಯವಾಗಿ ಜಾರಿಗೊಳಿಸದಿದ್ದರೆ ಗೊಂದಲಮಯ ಸನ್ನಿವೇಶದಲ್ಲಿ ಅಧಿಕಾರಿಗಳೂ ಸಹ ಗೊಂದಲಕ್ಕೆ ಈಡಾಗುತ್ತಾರೆ. ಅಧಿಕಾರಿಗಳಿಗೂ ಸಹ ಈ ಗೊಂದಲಮಯ ನೀತಿಯಿಂದ ಏನೂ ಗೊತ್ತಾಗದ ಹಾಗೆ ಆಗಿದೆ. ಆಮೇಲೆ ೨೦ ಅಂಶಗಳ ಕಾರ್ಯಕ್ರಮಗಳಿಗೆ ಒತ್ತು ಕೊಡಲಾಗುತ್ತದೆಂದು ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ತಿಳಿಸಲಾಗಿದೆ. ಇದು ಬಹಳ ಸ್ವಾಗತಾರ್ಹವಾದುದು. ದಿವಂಗತ ನಮ್ಮ ನೆಚ್ಚಿನ ಪ್ರಧಾನಿಗಳಾದ ಶ್ರೀಮತಿ ಇಂದಿರಾ ಗಾಂಧಿಯವರ ಆಡಳಿತದ ಅವಧಿಯಲ್ಲಿ ಈ ೨೦ ಅಂಶಗಳ ಕಾರ್ಯಕ್ರಮಗಳನ್ನು ಜಾರಿಗೆ ತರಲಾಗಿತ್ತು. ನಮ್ಮ ರಾಷ್ಟ್ರದಲ್ಲಿ ಪೂರ್ಣವಾಗಿ ೨೦ ಅಂಶಗಳ ಕಾರ್ಯಕ್ರಮವನ್ನು ಜಾರಿಗೆ ತಂದದ್ದು ಎಂದರೆ ನಮ್ಮ ಕರ್ನಾಟಕ ರಾಜ್ಯ. ಈ ಜನಹಿತ ಕಾರ್ಯಕ್ರಮಗಳು ಏನಿವೆ ಇವುಗಳನ್ನು ಮತ್ತೆ ಪುನರುಜ್ಜೀವನಗೊಳಿಸಬೇಕು. ಈ ೨೦ ಅಂಶಗಳ ಕಾರ್ಯಕ್ರಮಗಳನ್ನು

ಜನರು ಮರೆತು ಹೋಗುತ್ತಿದ್ದಾರೆ, ಏಕೆಂದರೆ ನಮ್ಮ ಹಿಂದಿನ ಸರ್ಕಾರದಲ್ಲಿ ಈ ಕಾರ್ಯಕ್ರಮಗಳನ್ನು ದೂರೀಕರಿಸಲಾಗಿತ್ತು. ಈ ಕಾರ್ಯಕ್ರಮಗಳಿಗೆ ಹಿಂದಿನ ಸರ್ಕಾರದವರು ಯಾವುದೇ ರೀತಿಯ ಒತ್ತನ್ನು ಕೊಟ್ಟಿದ್ದು ನೋಡಲಿಲ್ಲ. ಅವರಲ್ಲಿ ಒಂದೇ ಒಂದು ಅಂಶದ ಕಾರ್ಯಕ್ರಮ ಇತ್ತು ಎಂದೂ ಕಾಣುತ್ತದೆ.

ಯಾವ ಹಣಕಾಸಿನ ಸಂಪನ್ಮೂಲಗಳನ್ನು ರಾಜ್ಯದ ಬಡ ಜನತೆಯ ಹಿತಕ್ಕಾಗಿ ಬಳಸಬೇಕಾಗಿತ್ತು, ಅದರ ಮಾರ್ಗವನ್ನು ಬದಲಾವಣೆ ಮಾಡಿ ಕೇವಲ ಒಂದು ಅಂಶದ ಕಾರ್ಯಕ್ರಮವನ್ನು ಉಳಿಸಿಕೊಂಡರೆಂಬುದನ್ನು ಜನತೆಯು ನೋಡಿದ್ದಾರೆ. ಹಿಂದೆ ಮೌಲ್ಯಾಧಾರಿತ ರಾಜಕಾರಣದ ಬಗ್ಗೆ ಬಹಳಷ್ಟು ಮಾತುಗಳನ್ನು ಆಡಿದ್ದಾರೆ. ಜನರು ಅದರ ಮೌಲ್ಯಗಳನ್ನು ಸರಿಯಾಗಿ ತಿಳಿದುಕೊಂಡು ನಿರ್ಧರಿಸುವಂತಾಯಿತು. ಈಗ ಅದೇ ಜನರು ವಿರೋಧಿ ರಂಗದಲ್ಲಿ ಕಂಳಿತಿದ್ದಾರೆ. ಆ ಮಹನೀಯರುಗಳು ತಮ್ಮ ಆಡಳಿತದಲ್ಲಿ ಮೌಲ್ಯಾಧಾರಿತ ರಾಜಕಾರಣವನ್ನು, ಥಿಂಕ್‌ಟ್ಯಾಂಕ್‌ನ್ನು, ವಾಚ್‌ಡಾಗ್ ಕಮಿಟಿಗಳನ್ನು ಮುಂತಾಗಿ ಹೊಸ ಹೆಸರುಗಳನ್ನು ರಚನೆ ಮಾಡಿದ್ದರು. ಕಾವಲು ಸಮಿತಿಗಳನ್ನು ಮಾಡಿದರು. ಈ ಕಾವಲು ಏತಕ್ಕಾಗಿ ಬೇಕಾಯಿತು ಎಂಬುದು ನಮಗೆ ಇನ್ನು ಅರ್ಥವಾಗುತ್ತಾ ಇಲ್ಲ. ಇವೇ ಮುಂತಾದ ಹಲವಾರು ಕಾರ್ಯಕ್ರಮಗಳನ್ನು ಜಾರಿಗೆ ತಂದಿದ್ದು, ಅವುಗಳಲ್ಲಿ ಕೆಲವು ಅನಪೇಕ್ಷಿತವಾಗಿದ್ದು, ಹೆಚ್ಚು ಖರ್ಚುವೆಚ್ಚಗಳನ್ನು ಮಾಡುವಂಥಾ ಕಾರ್ಯಕ್ರಮಗಳಾಗಿದ್ದವು ಮತ್ತು ಅವುಗಳ ಮೂಲಕ ಖಜಾನೆ ಖಾಲಿಯಾಗಿತ್ತು. ಈಗ ನಾವು ಅಂಥ ಅನಪೇಕ್ಷಿತ ಹೊಸ ಕಾರ್ಯಕ್ರಮಗಳನ್ನು ಕೈಬಿಟ್ಟು, ಜನಪರ ಮತ್ತು ಜನಕಲ್ಯಾಣ ಯೋಜನೆಗಳನ್ನು ಜಾರಿಗೆ ತರಬೇಕಾಗಿದೆ. ನಿಜವಾದ ಅರ್ಥದಲ್ಲಿ ನಮ್ಮ ಮೇಲೆ ಜನತೆ ವಿಶ್ವಾಸ ಮತ್ತು ಭರವಸೆಯನ್ನು ಇಟ್ಟು ಕೊಂಡು ಆರಿಸಿಕಳುಹಿಸಿದ್ದಾರೆ. ಅದುದರಿಂದ ನಾವುಗಳು ರಚನಾತ್ಮಕವಾದ, ಕ್ರಿಯಾತ್ಮಕವಾದ, ಮತ್ತು ಸಾಮಾನ್ಯ ಜನರ ಆಶೋತ್ತರಗಳಿಗೆ ಸ್ಪಂದಿಸತಕ್ಕಂಥ ಕೆಲಸಗಳನ್ನು ಮಾಡಬೇಕಾಗಿದೆ. ಹೀಗೆ ಮಾಡುವಾಗ ನಾವು, ನಮ್ಮ ಸರಕಾರ ಮತ್ತು ಇತರ ಪಕ್ಷಗಳಿಗೆ ಕೂಡ ಈ ಕೆಲಸಗಳಲ್ಲಿ ಭಾಗವಹಿಸುವುದಕ್ಕೆ ಸಕ್ರೀಯವಾಗಿ ಒಂದು ಅವಕಾಶವನ್ನು ಕೊಟ್ಟು ಕಾರ್ಯಕ್ರಮಗಳನ್ನು ಹಾಕಿಕೋಡರೆ ಒಳ್ಳೆಯದಾಗಬಹುದು ಎಂದು ಹೇಳುತ್ತೇನೆ. ಹಾಗೆಯೇ ಇನ್ನೊಂದು ಒಳ್ಳೆಯ ಕಾರ್ಯಕ್ರಮವನ್ನು ಜಾರಿಗೊಳಿಸುವ ಸಮಯದಲ್ಲಿ ಅದು ಕೇಂದ್ರ ಸರಕಾರದ್ದೇ ಆಗಿರಲಿ, ಅಥವಾ ರಾಜ್ಯ ಸರಕಾರದ್ದೇ ಆಗಿರಲಿ, ಆ ಕಾರ್ಯಕ್ರಮಗಳನ್ನು ಮುಂದುವರಿಸಿಕೊಂಡು ಹೋಗುವಂಥ ಕೆಲಸವನ್ನು ಮಾಡಬೇಕು.

ಹಳ್ಳಿಗಾಡುಗಳಲ್ಲಿ ಭೂ ಹಿಡುವಳಿ ಜಮೀನುಗಳ ಬಗ್ಗೆ ಸಾಕಷ್ಟು ಸಮಸ್ಯೆಗಳು ಇವೆ. ಅಕ್ರಮವಾಗಿ ಪರಿಶಿಷ್ಟ ಜಾತಿ ಮತ್ತು ಜನಾಂಗಗಳವರು ಸಾಗುವಳಿ ಮಾಡಿಕೊಂಡು ಬಂದಿದ್ದಾರೆ ಅವುಗಳನ್ನು ಸಕ್ರಮಗೊಳಿಸುವ ಕಾರ್ಯಕ್ರಮವನ್ನು ಆದಷ್ಟು ಶೀಘ್ರವಾಗಿ ಮಾಡುತ್ತೇವೆ ಎಂದು ಮಾನ್ಯ ಕಂದಾಯ ಸಚಿವರು ಹೇಳಿದ್ದಾರೆ ಮತ್ತು ಆ ವಿಚಾರವು ಮಾನ್ಯ ರಾಜ್ಯಪಾಲರ ಭಾಷಣದಲ್ಲಿಯೂ ಅಡಕವಾಗಿದೆ. ಇದೊಂದು ಅತ್ಯಂತ ಸ್ವಾಗತಾರ್ಹವಾದ ವಿಚಾರವಾಗಿದೆ. ಅನೇಕ ವರ್ಷಗಳಿಂದ ನಮ್ಮಲ್ಲಿರತಕ್ಕಂಥ ಕಡು ಬಡವರಿಗೆ, ಒಂದೆರಡು ಎಕರೆ ಜಮೀನು ಇರತಕ್ಕಂಥ ಸಾಗುವಳಿದಾರರಿಗೆ, ಬಹಳ ವರ್ಷಗಳಿಂದಲೂ ಸೂಕ್ತವಾದ ಖಾತೆಯು ಇಲ್ಲವಾದುದರಿಂದ ಅವರಿಗೆ ಅನೇಕ ತೊಂದರೆಗಳು ಎದುರಾಗುತ್ತಿವೆ. ಅವರಿಗೆ ಸಾಲಸೌಲಭ್ಯಗಳು ದೊರೆಯುತ್ತಿಲ್ಲ. ಆದಕ್ಕಾಗಿ ಆತೀ ಶೀಘ್ರದಲ್ಲಿ ಅವರ ಅಕ್ರಮ ಸಾಗುವಳಿಯನ್ನು ಸಕ್ರಮ ಎಂದು ಹೇಳಿದರೆ ಅವರಿಗೆ ಅನುಕೂಲವಾಗುತ್ತದೆಯಾದ ಕಾರಣ ಆ ವಿಷಯದಲ್ಲಿ ಸೂಕ್ತ ಕಾರ್ಯಕ್ರಮಗಳನ್ನು ಹಾಕಿಕೊಂಡರೆ ಒಳ್ಳೆಯದಾಗುತ್ತದೆ ಈ ಬಡವರಲ್ಲಿ ಅನೇಕ ಜನರಿಗೆ ದೊರೆತ ಸಾಗುವಳಿ ಮತ್ತು ದಾಖಾಸ್ತು ಜಮೀನುಗಳು ಏನಿವೆ, ಅವುಗಳನ್ನು ಆ ಜನರು ಕಾಪಾಡಿಕೊಂಡು ಬರುವುದು ಕಷ್ಟವಾಗಿದೆ. ಆ ಬಗ್ಗೆ ಅನೇಕ ಬಡವರಿಂದ ದೂರುಗಳು ಬಂದಿವೆ. ಸಂಬಂಧಪಟ್ಟ ಅಧಿಕಾರಿಗಳು ಅವರಿಗೆ ಹಲವಾರು ರೀತಿಯಲ್ಲಿ ತೊಂದರೆ ಕೊಡುತ್ತಿದ್ದಾರೆ. ಪಹಣಿ ಬರೆಯಂಥವುದರಲ್ಲಿ ತಿದ್ದುಪಡಿಗಳನ್ನು ಮಾಡುತ್ತಾರೆ. ಇನ್ನೂ ಹಲವಾರು ರೀತಿಯಲ್ಲಿ ಈ ಮುಗ್ಧ ಬಡ ಜನರಿಗೆ ಸಮಸ್ಯೆಗಳನ್ನು ಉಂಟು ಮಾಡುತ್ತಿದ್ದಾರೆ. ಈ ಬಗ್ಗೆ ಅನೇಕ ಗ್ರಾಮಗಳಿಂದ ದೂರುಗಳು ಬರುತ್ತಿರುವುದನ್ನು ನಾವು ಕೇಳುತ್ತಾ ಇದ್ದೇವೆ. ಇಂತಹ ಜನರಿಗೆ ಇವೊತ್ತು ರಕ್ಷಣೆ ಕೊಡಬೇಕಾದ ಅವಶ್ಯಕತೆ ಇದೆ. ಜಮೀನು ವಿವಾದ ತೀರ್ಮಾನವಾದ ಕೇಸ್‌ಗಳಲ್ಲಿ ಸೂಕ್ತ ರಕ್ಷಣೆಯನ್ನು ಸೂಕ್ತರೀತಿಯಲ್ಲಿ ಕೊಡವುದರ ಮೂಲಕ ಅವರುಗಳು ಹಿಡುವಳಿಯನ್ನು ಮಾಡುವಂಥ ಒಂದು ಯೋಗ್ಯಪರಿಸ್ಥಿತಿಯನ್ನು ಕಲ್ಪಿಸಿಕೊಡಬೇಕೆಂದು ನಾನು ಸರಕಾರದವರಲ್ಲಿ ಕೇಳಿಕೊಳ್ಳುತ್ತೇನೆ.

ಇನ್ನು ಅಗತ್ಯವಸ್ತುಗಳ ಸರಬರಾಜು ವಿಚಾರದಲ್ಲಿ ಹೇಳುವುದಾದರೆ, ನಮ್ಮಲ್ಲಿ ಪಡಿತರ ವ್ಯವಸ್ಥೆಯು ಸರಿಯಾಗಿಲ್ಲ. ನ್ಯಾಯಬೆಲೆ ಅಂಗಡಿಗಳ ಮೂಲಕ ಸರಬರಾಜು ಮಾಡುವಲ್ಲಿ ಅನೇಕ ಲೋಪದೋಷಗಳಿವೆ. ನ್ಯಾಯ ಬೆಲೆ ಅಂಗಡಿಗಳ ಮೂಲಕ ಜನಸಾಮಾನ್ಯರಿಗೆ ಆಹಾರವಸ್ತುಗಳನ್ನು ಸೂಕ್ತ ರೀತಿಯಲ್ಲಿ ಒದಗಿಸಿಕೊಡಬೇಕಾಗಿದೆ. ಆ ಒಂದು ವ್ಯವಸ್ಥೆ ಇನ್ನೂ ಸಮರ್ಪಕವಾಗಿ ನಡೆಯುತ್ತಿಲ್ಲ. ಈ ಗ್ರೀನ್ ಕಾರ್ಡ್ ಮತ್ತು ಕೆಂಪು ಕಾರ್ಡುಗಳು ಅರ್ಹರಾದವರಿಗೆ ತಲುಪುತ್ತಾ ಇಲ್ಲ. ಕಾರ್ಡುದಾರರಿಗೂ ಸಮಯಕ್ಕೆ ಸರಿಯಾಗಿ ಅಗತ್ಯವಸ್ತುಗಳು ದೊರೆಯುತ್ತಾ ಇಲ್ಲ. ನ್ಯಾಯಬೆಲೆ ಅಂಗಡಿಗಳಲ್ಲಿ ಕಾರ್ಡ್‌ವಿತರಣೆ ಮತ್ತು ಆಹಾರವಸ್ತುಗಳ ವಿತರಣೆಯಲ್ಲಿ ಇರುವ ನ್ಯೂನ್ಯತೆಗಳನ್ನು, ಮತ್ತು ಆ ಬಗ್ಗೆ ಇರುವ ದೂರುಗಳನ್ನು ಹೋಗಲಾಡಿಸಿ ಸರಿಯಾದ ರೀತಿಯಲ್ಲಿ ಒಂದು ಸಮರ್ಪಕ ವ್ಯವಸ್ಥೆಯನ್ನು ಮಾಡಿ ಜನರಿಗೆ ಅನುಕೂಲ ಮಾಡಿಕೊಡುವುದಾಗಿ ರಾಜ್ಯಪಾಲರ ಭಾಷಣದಲ್ಲಿ ಪ್ರಸ್ತಾಪಿಸಿದ್ದಾರೆ.

ಇನ್ನು ಗ್ರಾಮೀಣ ಪ್ರದೇಶಗಳಲ್ಲಿ ಕೃಷಿಕಾರ್ಮಿಕರುಗಳು ಏನಿದ್ದಾರೆ, ಅವರು ಕೃಷಿ ಕೂಲಿಯನ್ನು ಅವಲಂಬಿಸಿ ಊಟ ಮಾಡತಕ್ಕಂಥ ಕಡು ಬಡವರಿದ್ದಾರೆ. ಅವರಿಗೆ ಅಗತ್ಯ ಸಾಮಗ್ರಿಗಳು ನ್ಯಾಯವಾಗಿ ದೊರಕುವ ಹಾಗೆ ವ್ಯವಸ್ಥೆ ಮಾಡಬೇಕು, ಈ ವಿಚಾರದಲ್ಲಿ ಹಿಂದಿನ ಸರಕಾರದವರು ತಮಗೆ ಬೇಕಾದ ವಿಜೆಂಟರುಗಳನ್ನು ನೇಮಿಸಿಕೊಂಡು ನಿರ್ದಿಷ್ಟವಾದ ನಿಯಮಾವಳಿಗಳು ಇಲ್ಲದೆ ಅಸಮರ್ಪಕವಾಗಿ ಈ ಹಂಚಿಕೆಯನ್ನು ಮಾಡಿದ್ದಾರೆ. ಹಾಗಾಗಿ ಅದು ನಮ್ಮ ಬಡಜನತೆಗೆ ಸರಿಯಾಗಿ ತಲುಪುತ್ತಿಲ್ಲ. ಇನ್ನು ಮುಂದೆ ಈ ರೀತಿ ಅನ್ಯಾಯವಾಗದ ರೀತಿಯಲ್ಲಿ ಈ ಸರಬರಾಜು ವಿಚಾರವನ್ನು ಪರ್ಯಾಲೋಚಿಸ ಬೇಕಾದುದು ಅವಶ್ಯವಾಗಿದೆ. ಈ ಒಂದು ಅಗತ್ಯವಸ್ತುಗಳ ಸರಬರಾಜು ವಿಚಾರದಲ್ಲಿ ಪುನರ್ ವ್ಯವಸ್ಥೆಯ ಬಗ್ಗೆ ಕಾರ್ಯಕ್ರಮ ತೆಗೆದುಕೊಳ್ಳುವರೆಂದು ನಾನು ಭರವಸೆಯನ್ನು ಇಟ್ಟುಕೊಳ್ಳುತ್ತೇನೆ.

ಇನ್ನು ಕುಡಿಯುವ ನೀರಿನ ವಿಚಾರದಲ್ಲಿ ಹೇಳುವುದಾದರೆ, ಕುಡಿಯುವ ನೀರಿನ ವಿಚಾರದಲ್ಲಿ ಸಾಕಷ್ಟು ಕಡೆಗಳಲ್ಲಿ ತೊಂದರೆ ಇದೆ. ಹಿಂದಿನ ಸರಕಾರದವರು ಮಾನ್ಯ ಗ್ರಾಮೀಣ ಅಭಿವೃದ್ಧಿ ಸಚಿವರಾಗಿದ್ದ ನಜೀರ್‌ಸಾಬ್‌ರವರು ಸಾಕಷ್ಟು ಪ್ರಮಾಣದಲ್ಲಿ ಬೋರ್‌ವೆಲ್‌ಗಳನ್ನು ಹಾಕಿಸಿ ಒಂದು ವ್ಯವಸ್ಥೆಯನ್ನು ಮಾಡಿ ಕುಡಿಯುವ ನೀರಿನ ಸಮಸ್ಯೆಯನ್ನು ನಿವಾರಿಸುವಲ್ಲಿ ಪ್ರಯತ್ನ ಪಟ್ಟಿದ್ದರು. ಆದರೆ ಆಗ ಹಾಕಿದ ಬೋರ್‌ವೆಲ್‌ಗಳಲ್ಲಿ ಅನೇಕ ಬೋರ್‌ವೆಲ್‌ಗಳು ಸಮರ್ಪಕವಾಗಿ ಈಗ ಕೆಲಸ ಮಾಡುತ್ತಾ ಇಲ್ಲ. ಕೆಲವು ಕಡೆಗಳಲ್ಲಿ ಅವುಗಳ ನಿರ್ವಹಣಾ ವ್ಯವಸ್ಥೆಯು ಸಮರ್ಪಕವಾಗಿರಲಿಲ್ಲ, ಕೆಲವು ದುರಸ್ತಿಗಾಗಿ ಕಾಯುತ್ತಿವೆಯಾದರೆ, ಮತ್ತು ಕೆಲವೊಂದು ದುರಸ್ತಿಯಾಗದ ಹಂತದಲ್ಲಿ ಇವೆ. ಈ ಬೋರ್‌ವೆಲ್‌ಗಳು ಹಲವಾರು ರೀತಿಯಲ್ಲಿ ಸಮಸ್ಯೆಗಳನ್ನು ತಂದೊಡ್ಡಿವೆ. ಕೆಲವೊಂದು ಪೂರ್ಣವಾಗಿ ಹಾಳಾಗಿ ಹೋಗಿವೆ. ಕೆಲವುಗಳಲ್ಲಿ ನೀರೇ ಇಲ್ಲ. ಇವುಗಳನ್ನು ಸರಿಪಡಿಸಿ ಕುಡಿಯುವ ನೀರಿನ ಸಮಸ್ಯೆಯನ್ನು ಪೂರ್ಣವಾಗಿ ಬಗೆಹರಿಸುವತ್ತ ಗಮನಕೊಡಬೇಕಾಗಿದೆ. ಗ್ರಾಮೀಣ ಅಭಿವೃದ್ಧಿ ಯೋಜನೆಯಲ್ಲಿ ಕುಡಿಯುವ ನೀರಿಗೆ ಆದ್ಯತೆಯನ್ನು ಕೊಟ್ಟು ಮಿನಿವಾಟರ್ ಸ್ಕೀಮ್‌ನ್ನು ಜಾರಿ ಮಾಡಿ ಒಂದು ದೊಡ್ಡ ಬೋರ್‌ವೆಲ್ ಹಾಕಿ ಆದಕ್ಕೆ ಪಂಪ್‌ಸೆಟ್‌ಗಳನ್ನು ಅಳವಡಿಸಿ, ನಲ್ಲಿಗಳ ಮೂಲಕ ನೀರು ಸರಬರಾಜು ಮಾಡುವ ಕಾರ್ಯಕ್ರಮವನ್ನು ಕೂಡ ಮಾಡಿದ್ದರು. ಇಂಥ ಸ್ಕೀಮ್‌ನಲ್ಲಿ ಕೆಲವು ಕಡೆ ನೀರು ಬತ್ತಿ ಹೋಗಿದೆ, ಮತ್ತೆ ಕೆಲವು ಕಡೆಗಳಲ್ಲಿ ಪಂಪ್‌ಗಳು ಕೆಟ್ಟು ಹೋಗಿವೆ. ಇವೇ ಮುಂತಾದ ತೊಂದರೆಗಳಿವೆ. ಈಗಲಾದರೂ ಗ್ರಾಮಾಂತರ ಪ್ರದೇಶಗಳಿಗೆ ಸಮಗ್ರ ಕುಡಿಯುವ ನೀರಿನ ಯೋಜನೆಯನ್ನು ಪರಿಪೂರ್ಣವಾದ ರೀತಿಯಲ್ಲಿ ಮಾಡುವುದು ಅತ್ಯಗತ್ಯ ಎಂದು ನನಗನ್ನಿಸುತ್ತದೆ. ಆದಕ್ಕೆ ಅಪಾರ ಹಣದ ವೆಚ್ಚ ಮಾಡಬೇಕಾಗುತ್ತದೆ. ಆದರೆ ಆದರಿಂದ ಆ ಜನರಿಗೆ ಬಹಳಷ್ಟು ಉಪಯೋಗ ಮತ್ತು ಅನುಕೂಲಗಳಾಗುತ್ತವೆ ಎಂಬುದನ್ನು ನಾವು ಗಮನದಲ್ಲಿ ಇಟ್ಟುಕೊಳ್ಳ ಬೇಕಾಗುತ್ತದೆ. ಈ ಬಗ್ಗೆ ನಮ್ಮ ಸರಕಾರ ಪುನರ್‌ಪರಿಶೀಲಿಸಿ, ಇದಕ್ಕೆ ಬೇಕಾಗುವ ಸಂಪನ್ಮೂಲ ಗಳನ್ನು ದೊಡ್ಡ ದೊಡ್ಡ ಯೋಜನೆಗಳಿಂದ ಬರುವ ಹಣದಿಂದ ಹೊಂದಿಸಿಕೊಂಡು ಈ ಒಂದು ಕುಡಿಯುವ ನೀರಿನ ವ್ಯವಸ್ಥೆಯನ್ನು ಸರಿ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಕರೆಕಾಂಟಿಗಳ ಪ್ರದೇಶಗಳಲ್ಲಿ ಹೂಳೆತ್ತುವ ಕಾರ್ಯಕ್ರಮ ನಿಂತು ಹೋಗಿದೆ. ಅದನ್ನು ಹಂತಹಂತವಾಗಿ ಮಾಡುವ ಬಗ್ಗೆ ಕಾರ್ಯಕ್ರಮವನ್ನು ಹಾಕಿಕೊಳ್ಳ ತಕ್ಕಂಥ ವಿಚಾರದಲ್ಲಿ ಪಿ.ಡಬ್ಲ್ಯು.ಡಿ ಯವರಾಗಲಿ, ಗ್ರಾಮೀಣ ಅಭಿವೃದ್ಧಿ ಇಲಾಖೆಯವರಾಗಲಿ, ರೆವಿನ್ಯೂ ಇಲಾಖೆಯವರೇ ಆಗಲಿ, ಸಕಾಲದಲ್ಲಿ ಮಾಡಲಿಲ್ಲವಾದರೆ ಕಷ್ಟವಾಗುತ್ತದೆ. ಏಕೆಂದರೆ ಇಂಥ ಜಲಸಂಪನ್ಮೂಲಗಳನ್ನು ಹೊಸದಾಗಿ ಮಾಡಬೇಕಾದರೆ ಹೆಚ್ಚಿನ ಹಣದ ಅವಶ್ಯಕತೆ ಬರುತ್ತದೆ. ನೀರಾವರಿ ಯೋಜನೆಗಳಿಗೆ ಆದ್ಯತೆಯನ್ನು ಕೊಡತಕ್ಕಂಥ ಸಂದರ್ಭದಲ್ಲಿ ದೊಡ್ಡ ದೊಡ್ಡ ಯೋಜನೆಗಳನ್ನು ಮುಂದುವರಿಸಿಕೊಂಡು

ಹೋಗುವುದು ತಾಂತ್ರಿಕವಾಗಿ ನಿಲುಗಡೆಯಾದಂಥವುಗಳನ್ನು ಸೂಕ್ತ ರೀತಿಯಲ್ಲಿ ಮುಂದುವರಿಸುವುದು, ಇರತಕ್ಕಂಥ ಕೆರೆಕಟ್ಟೆಗಳನ್ನು ದುರಸ್ತಿ ಮಾಡುವುದೇ ಮೊದಲಾದ ಕಾರ್ಯಗಳನ್ನು ಮಾಡಬೇಕಾಗಿದೆ.

ಡೀ ಸಿಲ್ಟಿಂಗ್ ಕೆಲಸವನ್ನು ಸಮಯಕ್ಕೆ ಸರಿಯಾಗಿ ಮಾಡಬೇಕು. ನಮ್ಮ ಸರಕಾರ ಸಮಯಕ್ಕೆ ಸರಿಯಾಗಿ ಇದನ್ನು ಮಾಡುತ್ತದೆಂಬ ನಿರೀಕ್ಷೆಯನ್ನು ನಾನು ಇಟ್ಟುಕೊಂಡಿದ್ದೇನೆ. ಹತ್ತು ವರ್ಷಗಳ ಹಿಂದೆ ಭಾರತ ದೇಶದಲ್ಲಿ ಕರ್ನಾಟಕ ರಾಜ್ಯ ಆರ್ಥಿಕ ವ್ಯವಸ್ಥೆಯಲ್ಲಿ ಮತ್ತು ಅಭಿವೃದ್ಧಿಯ ವಿಷಯದಲ್ಲಿ ೧೯ನೇ ಸ್ಥಾನದಲ್ಲಿ ಇತ್ತು ಅಂಥಾದ್ದನ್ನು ೨ ಅಥವಾ ೩ ಸ್ಥಾನಕ್ಕೆ ತೆಗೆದುಕೊಂಡು ಹೋಗ ತಕ್ಕಂತಹ ಒಂದು ಪ್ರಯತ್ನ ನಡೆಯಿತು; ಆದನ್ನು ನಾವು ನಾವೆಲ್ಲರೂ ಕೂಡ ನೋಡಿದ್ದೇವೆ. ಆದರೆ ಇವತ್ತು ನಮ್ಮ ರಾಜ್ಯ ಹಿಂದುಳಿದಿದೆ ಎಂಬುದು ನಮ್ಮಲ್ಲಿನ ಅಂಕಿ ಅಂಶಗಳನ್ನು ನೋಡಿದರೆ ಗೊತ್ತಾಗುತ್ತದೆ. ಯಾವ ಕ್ಷೇತ್ರದಲ್ಲಿ ನೋಡಿದರೂ ಕೂಡ ನಮ್ಮ ರಾಜ್ಯ ಅವನತಿಗೆ ಇಳಿಯತಕ್ಕಂತಹ ಪರಿಸ್ಥಿತಿ ಉಂಟಾಗಿದೆ. ನಮ್ಮ ರಾಜ್ಯದ ಹಣಕಾಸಿನ ಪರಿಸ್ಥಿತಿ ಏನು ಕೆಳಕ್ಕೆ ತಳ್ಳಲ್ಪಟ್ಟಿದೆ. ಇದನ್ನು ಮತ್ತೆ ಮೇಲಕ್ಕೆ ಎತ್ತಬೇಕಾದರೆ ಕೇಂದ್ರ ಸರಕಾರದ ನೆರವು ಸಹಾಯ ಸಹಕಾರ ಮುಖ್ಯ. ನಮ್ಮಲ್ಲಿರುವ ಸಂಪನ್ಮೂಲಗಳನ್ನು ಕ್ರೋಢೀಕರಿಸಿ ರಚನಾತ್ಮಕ ಕಾರ್ಯಕ್ರಮಗಳನ್ನು ಹಾಕಿಕೊಂಡರೆ ಮಾತ್ರ ಇದು ಸರಿಯಾಗುತ್ತದೆ. ಈಗಿನ ಪರಿಸ್ಥಿತಿ ಸುಧಾರಿಸಬೇಕಾದರೆ ಅನೇಕ ವರ್ಷಗಳೇ ಬೇಕಾಗುತ್ತದೆ ಇನ್ನು ನಗರಪಾಲಿಕೆಗಳ ಚುನಾವಣೆಗಳು ಅನೇಕ ವರ್ಷಗಳಿಂದ ನಡೆದಿಲ್ಲ ಈಗ ನಡೆಯತಕ್ಕಂತಹ ಸಂದರ್ಭ ಬಂದಿದೆ. ಹಿಂದೆ ಚುನಾವಣೆಯನ್ನು ನಡೆಸುವಾಗ ಮತದಾರರ ಪಟ್ಟಿಯನ್ನು ಪರಿಷ್ಕರಣ ಮಾಡಬೇಕಾಗಿತ್ತು ಆದರೆ ಅದು ಆಗಲಿಲ್ಲ. ಡೀ ಲಿಮಿಟೇಷನ್ ವಿಷಯದಲ್ಲಾಗಲೀ, ಮತದಾರರ ಪರಿಷ್ಕರಣ ಪಟ್ಟಿಯನ್ನು ತಯಾರು ಮಾಡಲು ಸಾಕಷ್ಟು ಸಮಯ ಇದೆಯೋ ಇಲ್ಲವೋ ಎನ್ನುವುದನ್ನು ಪರಿಶೀಲನೆ ಮಾಡುವುದರ ಮೂಲಕ ಚುನಾವಣೆಯನ್ನು ಎದುರಿಸುವುದು ಒಳ್ಳೆಯದೆಂದು ನನಗನ್ನಿಸುತ್ತದೆ. ಇನ್ನು ಬೀಜ ನಿಗಮದ ಮೂಲಕ ರೈತರಿಗೆ ಬೀಜ ಗೊಬ್ಬರ ಔಷಧಿ ಮುಂತಾದವುಗಳನ್ನು ಏನು ಸರಬರಾಜು ಮಾಡುತ್ತಾರೆ, ಇದನ್ನು ಸರಿಯಾಗಿ ವಿತರಣೆ ಮಾಡಬೇಕು ಹಾಗೂ ಒಳ್ಳೆಯ ಗುಣವಂಟ್ಟದವುಗಳನ್ನು ನೀಡಬೇಕು. ಈಗ ಬೀಜ ನಿಗಮದಿಂದ ನೀಡುವ ಬೀಜಗಳು ಸರಿಯಾಗಿ ಹುಟ್ಟುವುದಿಲ್ಲ ಒಂದು ವೇಳೆ ಹುಟ್ಟಿದರೂ ಕೂಡ, ಅದು ಬೆಳೆಯುವುದಿಲ್ಲ.ಇಂತಹ ನ್ಯೂನತೆಗಳು ಬೀಜದಲ್ಲಿ ಇದೆ ಇದನ್ನು ಸರಿಪಡಿಸಿ ಕೃಷಿ ಬಲಯಂಕ್ಕೆ ಹೆಚ್ಚಿನ ಆದ್ಯತೆಯನ್ನು ಕೊಡಬೇಕಾದುದು ಸರಕಾರದ ಆದ್ಯ ಕರ್ತವ್ಯ. ಇನ್ನು ಅಣುಶಕ್ತಿಯವರ ಮತ್ತು ಕೈಗಾ ಯೋಜನೆಯಿಂದ ನಮ್ಮ ವಿದ್ಯುಚ್ಛಕ್ತಿ ಉತ್ಪಾದನೆಯನ್ನು ಹೆಚ್ಚು ಮಾಡಿಕೊಳ್ಳಬೇಕು. ಶರಾವತಿ, ಗೇರುಸೊಪ್ಪೆ, ಗಗನಚುಕ್ಕಿ ಭರಚುಕ್ಕಿ ಮುಂತಾದ ಯೋಜನೆಗಳಿಂದ ಹಿಂದೆ ಆತಿ ಹೆಚ್ಚಿನ ವಿದ್ಯುತ್ತನ್ನು ಉತ್ಪಾದನೆ ಮಾಡಿ, ಅದನ್ನು ನಾವು ಉಪಯೋಗ ಮಾಡಿಕೊಂಡು ಹೆಚ್ಚುವರಿ ವಿದ್ಯುತ್ತನ್ನು ಬೇರೆ ರಾಜ್ಯಗಳಿಗೆ ಕೊಡುತ್ತಿದ್ದೆವು. ಆದರೆ ಇವತ್ತಿನ ದಿವಸ ನಮಗೇ ಸಾಕಾಗುವುದಿಲ್ಲ. ಅಂತಹ ಪರಿಸ್ಥಿತಿ ಬಂದಿದೆ. ನಮ್ಮ ಬೇಡಿಕೆ ಏನಿದೆ ಅದಕ್ಕೆ ತಕ್ಕಂತಹ ವಿದ್ಯುತ್ ಉತ್ಪಾದನೆಯಾಗುತ್ತಿಲ್ಲ. ಇದರಿಂದಾಗಿ ನಾವು ಯಾವುದೇ ವಲಯದಲ್ಲಿ ಮುಂದುವರಿಯುವುದಕ್ಕೆ ಸಾಧ್ಯವಾಗುವುದಿಲ್ಲ. ೩–೪ ವರ್ಷಗಳಿಂದ ಪಂಪ್‌ಸೆಟ್‌ಗಳಿಗೆ ವಿದ್ಯುತ್ತನ್ನು ಒದಗಿಸಲು ಸಾಧ್ಯವಾಗುತ್ತಿಲ್ಲ. ಗ್ರಾಮೀಣ ಪ್ರದೇಶಗಳಲ್ಲಿನ ಕೈಗಾರಿಕೆಗಳಿಗೆ ಬೇಕಾದಂತಹ ಮನೆಗಳಿಗೆ ಬೇಕಾದಂತಹ ವಿದ್ಯುತ್ತನ್ನು ನೀಡಲು ಸಾಧ್ಯವಾಗುತ್ತಿಲ್ಲ. ಇರುವ ಕೈಗಾರಿಕೆಗಳಿಗೆ ವಿದ್ಯುತ್ ದೊರೆಯದೇ ಇದ್ದಾಗ ಹೊಸ ಕೈಗಾರಿಕೆಯನ್ನು ಪ್ರಾರಂಭ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ, ಮುಂದೆ ಅದು ಸಿಕ್ ಇಂಡಸ್ಟ್ರೀ ಎಂದು ಉಳಿದುಕೊಳ್ಳುವಂತಹ ಸಂದರ್ಭ ಇದೆ. ಕೈಗಾರಿಕೆಗಳನ್ನು ಪ್ರಾರಂಭ ಮಾಡಿದಂತಹವರು ಸಾಲಗಾರರಾಗಿ ಒತ್ತಡದಲ್ಲಿ ಸಿಕ್ಕಿ ಬೀಳಬೇಕಾದಂತಹ ಪರಿಸ್ಥಿತಿ ಬಂದಿದೆ. ನಮ್ಮ ವಿರೋಧ ಪಕ್ಷದ ಸದಸ್ಯರು ಕೇಂದ್ರ ಸರಕಾರದ ಮಟಿಯಿಂದ ಹೆಚ್ಚಿನ ನೆರವನ್ನು ಪಡೆಯಲು ನಮ್ಮೊಂದಿಗೆ ಸಹಕರಿಸಬೇಕು. ಈ ಬಗ್ಗೆ ಸರ್ಕಾರದವರು ಟೈಮ್ ಬೌಂಡ್ ಪ್ರೋಗ್ರಾಮ್ ಅನ್ನು ಹಾಕಿಕೊಂಡು ಅಭಿವೃದ್ಧಿ ಕಾರ್ಯಕ್ರಮವನ್ನು ಕೈಗೊಳ್ಳಬೇಕು. ಇನ್ನು ಮಹಿಳೆಯರು ಮತ್ತು ಮಕ್ಕಳ ಕಲ್ಯಾಣ ಕಾರ್ಯಕ್ರಮಗಳ ಬಗ್ಗೆ ಒಂದೆರಡು ಮಾತುಗಳನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ಐ.ಸಿ.ಡಿ.ಎಸ್. ಪ್ರೋಗ್ರಾಂ ಎಂದು ಕೇಂದ್ರದಿಂದ ಹಾಕಿಕೊಂಡಿರತಕ್ಕಂಥ ಯೋಜನೆಗಳೆಲ್ಲಾ ನಮ್ಮ ರಾಜ್ಯದಲ್ಲಿ ಅನೇಕ ಭಾಗಗಳಲ್ಲಿ ಈಗಾಗಲೇ ಚಾರಿಯಲ್ಲಿವೆ. ಇದನ್ನು ಹೆಚ್ಚಿನ ಸಂಖ್ಯೆಯಲ್ಲಿ ಮಾಡಿಕೊಡತಕ್ಕಂಥ ಕಾರ್ಯಕ್ರಮವನ್ನು ಹಾಕಿಕೊಳ್ಳ ಬೇಕು. ಮಹಿಳೆಯರು ಮತ್ತು ಮಕ್ಕಳ ಕಲ್ಯಾಣದ ಬಗ್ಗೆ ಏನೂ ಯೋಜನೆಗಳನ್ನು ಹಾಕಿಕೊಳ್ಳುತ್ತೇವೆ, ಅದು ಸಮರ್ಪಕವಾಗಿ ಜಾರಿ ಆಗಬೇಕಾದರೆ ಪರಸ್ಪರ ಪೂರಕವಾಗಿ ಆ ಕೆಲಸಗಳನ್ನು ಆಯಾ ಇಲಾಖೆಗಳು ಸೇರಿ ಮಾಡಿದರೆ ಮಾತ್ರ ಸಾಧ್ಯವಾಗುತ್ತದೆ. ಮಹಿಳೆಯರು ತೀರಾ ಹೆಚ್ಚಿನ ಸಂಖ್ಯೆಯಲ್ಲಿ ಹಿಂದುಳಿದಿರತಕ್ಕಂಥವರು ಆಗಿದ್ದಾರೆ. ಶೇಕಡ ೫೦ ಭಾಗ ಮಹಿಳಾ ಜನಸಂಖ್ಯೆ ಏನು ಇದೆ, ಅವರಿಗೆ ಆದ್ಯತೆಯನ್ನು ಕೊಡುಂ

ತ್ತೇವೆ. ಎಂದು ಹೇಳುತ್ತೇವೆ ಆದರೆ ಈಗ ಕೊಡುವುದು ನೋಡಿದರೆ ಅದು ಅದಷ್ಟೂ ಕನಿಷ್ಟ ಮಟ್ಟದಲ್ಲಿದೆ ಎಂದು ನಾನಾದರೂ ಬಹಳ ವಿಷಾದದಿಂದ ಹೇಳಬೇಕಾಗುತ್ತದೆ. ಮಾನ್ಯ ವಿರೋಧಿ ಪಕ್ಷದ ಸದಸ್ಯರಲ್ಲಿ ನೋಡಿದರೆ ಒಬ್ಬ ಮಹಿಳೆಯರು ಕೂಡಾ ಈ ಒಂದು ಸಭೆಯಲ್ಲಿ ಇಲ್ಲ. ಏತಕ್ಕೆ ಈ ಮಟ್ಟಕ್ಕೆ ಹೋಯಿತೋ ಗೊತ್ತಿಲ್ಲ. ಶೇಕಡ ೨೦ರಷ್ಟು ೩೦ರಷ್ಟು ಮೀಸಲಾತಿಯನ್ನು ಮಹಿಳೆಯರಿಗೆ ಕೊಡುತ್ತೇವೆ ಎನ್ನುವ ಮಾತನ್ನು ಹೇಳುತ್ತೇವೆ. ಆದರೆ ಅವರನ್ನು ಹಿಂದೆ ದೂಡುವುದಕ್ಕೆ ಏನೇನು ಪ್ರಯತ್ನಗಳು ಬೇಕೋ ಅದನ್ನು ಎಲ್ಲಾ ರೀತಿಯಲ್ಲಿಯೂ ಎಲ್ಲಾ ಕ್ಷೇತ್ರದಲ್ಲಿಯೂ ಮಾಡತಕ್ಕಂಥ ಒಂದು ಸಂದರ್ಭ ಇದೆ ಆದುದರಿಂದ ಅವರ ಒಂದು ಯೋಗಕ್ಷೇಮ ಮತ್ತು ಅವರಅಭಿವೃದ್ಧಿ ಬಗ್ಗೆ ಹೆಚ್ಚಿನ ಕಾಳಜಿಯನ್ನು ವಹಿಸತಕ್ಕಂಥ ಕಾರ್ಯಕ್ರಮಗಳನ್ನು ಹಾಕಿಕೊಂಡು ಅದಕ್ಕೆ ಒತ್ತು ಕೊಟ್ಟು, ಅದಕ್ಕಾಗಿ ಹಣದ ಸೌಲಭ್ಯವನ್ನು ಒದಗಿಸತಕ್ಕಂಥ ಸಂದರ್ಭದಲ್ಲಿ ಹೆಚ್ಚಿನ ಒಂದು ಮೀಸಲಾತಿಯನ್ನು ಸಹ ಕೊಡಬೇಕು ಎಂದು ಹೇಳಿ ನಾನಾದರೂ ಈ ಸಭೆಯ ಮೂಲಕ ಆರಿಕೆ ಮಾಡುತ್ತೇನೆ, ನಮ್ಮಲ್ಲಿ ಯಾವ ರೀತಿ ವಿದ್ಯಾಭ್ಯಾಸ ನಡೆಯುತ್ತಿದೆ, ಅದರಲ್ಲಿ ಅಪಾರವಾಗ ನ್ಯೂನತೆಗಳಿವೆ, ಇದಕ್ಕೆ ಸಮಗ್ರವಾದ ಪರಿಷ್ಕಾರ ಆಗಬೇಕಾದರೆ ಒಂದು ತಜ್ಞರ ಸಮಿತಿಯನ್ನು ನೇಮಿಸಿ, ತಜ್ಞರಿಂದ ಒಳಗೊಂಡಂಥ, ಹೆಚ್ಚಿನ ಜ್ಞಾನವನ್ನು ಪರಿಜ್ಞಾನವನ್ನು ಹೊಂದಿದಂಥ ಏರ್ಪಾಡು ಮಾಡಿದರೆ ಒಂದು ರೀತಿಯ ಸಮಗ್ರವಾದ ಬದಲಾವಣೆಯನ್ನು ಮಾಡಿದರೆ ಒಳ್ಳೆಯದು ಎಂದು ನಾನು ಈ ಸದನದಲ್ಲಿ ಒತ್ತು ಕೊಟ್ಟು ಹೇಳಬೇಕಾಗುತ್ತದೆ. ಏಕೆಂದರೆ ಇಂದಿನ ಮಕ್ಕಳೇ ಮುಂದಿನ ಪ್ರಜೆಗಳು ಆಗತಕ್ಕಂಥವರು. ನಮ್ಮಲ್ಲಿ ತಾಂತ್ರಿಕ ಶಿಕ್ಷಣದ ಸೌಲಭ್ಯ ಕಡಿಮೆ ಇದೆ. ಆದಕ್ಕಾಗಿ ಇಂಜಿನಿಯರಿಂಗ್ ಕಾಲೇಜುಗಳನ್ನು ಸ್ಥಾಪಿಸುತ್ತೇವೆ. ವೈದ್ಯಕೀಯ ಶಿಕ್ಷಣ ಸಂಸ್ಥೆಗಳು ಇಂದು ಕೇವಲ ಬರೀ ವ್ಯವಹಾರಿಕವಾದ ಶಿಕ್ಷಣ ಸಂಸ್ಥೆಗಳಾಗಿವೆ. ಆದರೆ ಗ್ರಾಮಾಂತರ ಪ್ರದೇಶದ ಮಕ್ಕಳು ಎಸ್.ಎಸ್.ಎಲ್.ಸಿ. ಓದಲಿ ಪಿ.ಯು.ಸಿ. ಓದಲಿ ಅವರುಗಳಿಗೆ ಉದ್ಯೋಗಾವಕಾಶ ಇಲ್ಲದೆ ಉದ್ಯೋಗದ ತರಬೇತಿ ಇಲ್ಲದೆ ನಿರುದ್ಯೋಗಿಗಳಾಗುತ್ತಿದ್ದಾರೆ. ಇಂಥ ಸಂದರ್ಭದಲ್ಲಿ ತಾಂತ್ರಿಕ ಶಾಲೆಗಳನ್ನು, ಕಾಲೇಜುಗಳನ್ನು ಹೆಚ್ಚಿನದಾಗಿ ಗ್ರಾಮಾಂತರ ಪ್ರದೇಶದಲ್ಲಿ ಸ್ಥಾಪನೆ ಮಾಡತಕ್ಕಂಥ ಕೆಲಸವನ್ನು ಹಾಕಿಕೊಳ್ಳಬೇಕೆಂದು ಹೇಳುತ್ತೇನೆ ನನ್ನ ವೈಯಕ್ತಿಕ ಅಭಿಪ್ರಾಯ ಏನಂ ಎಂದರೆ, ಸೆಕೆಂಡರಿ ವಿದ್ಯಾಭ್ಯಾಸದ ಮಟ್ಟದವರೆಗೆ ಗ್ರಾಮಾಂತರ ಪ್ರದೇಶದ ಮಕ್ಕಳಿಗೆ ಸಮಗ್ರವಾಗಿ ಫ್ರೀ ಎಜುಕೇಷನ್ ಎಂದರೆ ಪುಕ್ಕಟೆಯಾದ ವಿದ್ಯಾಭ್ಯಾಸವನ್ನು ಕಡ್ಡಾಯವಾಗಿ ಕೊಡಿ ಎಂದು ಹೇಳುತ್ತೇನೆ. ಈ ತಾಂತ್ರಿಕ ಶಿಕ್ಷಣ ಕಾಲೇಜುಗಳು ಏನಿವೆ, ಅವುಗಳು ಇನ್ನೂ ಹೆಚ್ಚಿನದಾಗಿ ಗ್ರಾಮಾಂತರ ಮಟ್ಟದಲ್ಲಿ ಹಾಗೂ ತಾಲ್ಲೂಕು ಮಟ್ಟದಲ್ಲಿ ಬರಬೇಕು. ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಮಾತ್ರ ಸ್ಥಾಪನೆ ಮಾಡಿದರೆ ಮತ್ತೆ ಇವು ಹೆಚ್ಚಿನ ಒಂದು ವ್ಯಾಪಾರಿ ಕೇಂದ್ರಗಳಾಗಿ ಬೆಳೆಯುವುದಕ್ಕೆ ಅವಕಾಶ ಆಗುತ್ತದೆ. ಈ ಶಿಕ್ಷಣದ ನೀತಿಯನ್ನು ಸಮರ್ಪಕವಾಗಿ ನಿರೂಪಣೆ ಮಾಡುವುದಕ್ಕೆ ಶಿಕ್ಷಣ ತಜ್ಞರ ಒಂದು ಸಮಿತಿಯನ್ನು ನೇಮಿಸಿಕೊಳ್ಳುವುದು ಒಳ್ಳೆಯದು ಎಂಬ ಮಾತನ್ನು ಸರ್ಕಾರದ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಇವತ್ತು ನಮ್ಮ ಕರ್ನಾಟಕದ ಜನತೆ ನಮ್ಮನ್ನು ಹೆಚ್ಚು ಸಂಖ್ಯೆಯಲ್ಲಿ ಆರಿಸಿ, ನಮ್ಮ ಪಕ್ಷದ ಸರ್ಕಾರ ಅಧಿಕಾರಕ್ಕೆ ಬರುವುದಕ್ಕೆ ಕಾರಣರಾಗಿದ್ದಾರೆ ಜನರು ಅತಿಯಾಗಿ ವಿಶ್ವಾಸ, ಭರವಸೆ, ನಂಬಿಕೆಗಳನ್ನು ನಮ್ಮ ಮೇಲೆ ಇಟ್ಟುಕೊಂಡಿದ್ದಾರೆ. ಆ ನಿರೀಕ್ಷೆಗಳನ್ನು ಸುಳ್ಳು ಮಾಡದ ರೀತಿಯಲ್ಲಿ ನಾವು ಕೆಲಸಕಾರ್ಯಗಳನ್ನು ಮಾಡಬೇಕು. ಸುಳ್ಳು ಘೋಷಣೆಯಿಂದ ಪುಸ್ತಕಗಳನ್ನು ಅಂಕಿ ಅಂಶಗಳ ಆಧಾರದ ಮೇಲೆ ಮಾಯಾ ಲೋಕ ಸೃಷ್ಟಿಸುವುದನ್ನು ಬಿಟ್ಟು ಅಂದರೆ ಹಿಂದಿನ ಸರ್ಕಾರದವರು ಮಾಡಿದ ಹಾಗೆ ಮಾಯಾ ಲೋಕ ಸೃಷಿಸಿದರು. ಆದರೆ ಅಲ್ಲಿ ನೋಡಿದರೆ ಕಾರ್ಯತಃ ಯಾವುದೂ ಇರುವುದಿಲ್ಲ, ಈ ಮಾಯಾಲೋಕದ ಭ್ರಮೆಗೆ ನಾವು ಹೋಗುವುದು ಬೇಡ. ರಚನಾತ್ಮಕವಾದ ಕಾರ್ಯಕ್ರಮಗಳನ್ನು ಜಾರಿ ಮಾಡುವುದರಲ್ಲಿ ನಮ್ಮ ಸರಕಾರ ಮತ್ತು ನಮ್ಮ ಪಕ್ಷ ಹೆಚ್ಚಿನ ಒಂದು ಶಿಸ್ತಿನಿಂದ ಹೆಚ್ಚಿನ ಒಂದು ಕಳಕಳಿಯಿಂದ, ಹೆಚ್ಚಿನ ಒಂದು ಪ್ರಾಮಾಣಿಕತೆಯಿಂದ ಕೆಲಸವನ್ನು ಮಾಡುತ್ತದೆ ಎಂದು ಆಶಿಸಿ ಅದಕ್ಕಾಗಿ ಸಂಪೂರ್ಣವಾದ ಸಹಕಾರವನ್ನು ನಮ್ಮ ವಿರೋಧಿ ಪಕ್ಷದ ಸದಸ್ಯರು ಮತ್ತು ನಾಯಕರು ಕೊಡುತ್ತಾರೆ ಎನ್ನತಕ್ಕಂಥ ಭರವಸೆಯಾನ್ನು ಹೊಂದಿ ನನ್ನ ಭಾಷಣವನ್ನು ಇಷ್ಟು ಹೊತ್ತು ಆಲಿಸಿದ್ದಕ್ಕಾಗಿ ತಮಗೆಲ್ಲಾ ವಂದಿಸಿ ಮತ್ತು ಅಧ್ಯಕ್ಷರಿಗೂ ನನ್ನ ವಂದನೆಯನ್ನು ಸಲ್ಲಿಸಿ ನನ್ನಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಸಿ. ಬೈರೇಗೌಡ (ವೇಮಗಲ್).—ಮಾನ್ಯ ಸಭಾಧ್ಯಕ್ಷರೇ. ಈ ದಿವಸ ಈ ಸಭೆಯ ಮುಂದೆ ಸನ್ಮಾನ್ಯ ರಾಜ್ಯಪಾಲರು ಮಾಡಿರತಕ್ಕ ಭಾಷಣದ ಮೇಲಿನ ವಂದನಾ ನಿರ್ಣಯವನ್ನು ವಿರೋಧಿಸಿ ಎರಡೂವರೆ ಮಾತುಗಳನ್ನು ಆಡುವುದಕ್ಕೆ ಇಚ್ಛಿಸುತ್ತೇನೆ. ಕರ್ನಾಟಕದ ಇತಿಹಾಸದಲ್ಲಿಯೇ ಎಂದೂ ಇಲ್ಲದೇ ಇರತಕ್ಕ ರೀತಿಯಲ್ಲಿ ಇಷ್ಟೊಂದು ದೊಡ್ಡ ಸಂಖ್ಯೆಯಲ್ಲಿ ಆಡಳಿತ ಪಕ್ಷ ಇಂದು ಅಧಿಕಾರವನ್ನು ವಹಿಸಿಕೊಂಡಿದೆ. ಅದು ಜನರ ತೀರ್ಮಾನ. ಅದನ್ನು ಎಲ್ಲರೂ ತಲೆಬಾಗಿ ಒಪ್ಪಿ

ಕೊಳ್ಳಬೇಕು. ಹಾಗೂ ಮಾನ್ಯತೆ ನೀಡಬೇಕಾದುದು ನಮ್ಮ ಕರ್ತವ್ಯ. ಆದೇ ರೀತಿಯಲ್ಲಿ ನಮ್ಮ ಪಕ್ಷ ಕೂಡ ಅತ್ಯಲ್ಪ ಸ್ಥಾನವನ್ನು ಹೊಂದಿದ್ದರೂ ಸಹ ಜನರ ತೀರ್ಮಾನವನ್ನು ಒಪ್ಪಿಕೊಂಡಿದ್ದೇವೆ. ಜನರು ಇಷ್ಟಾದರೂ ನಮಗೆ ಅವಕಾಶವನ್ನು ಕೊಟ್ಟಿದ್ದಕ್ಕಾಗಿ ಜನತೆಗೆ ಕೃತಜ್ಞತೆಗಳನ್ನು ಸಲ್ಲಿಸ ಬೇಕಾದುದು ನಮ್ಮ ಕರ್ತವ್ಯ. ನಾನು ರಾಜ್ಯಪಾಲರ ಭಾಷಣವನ್ನು ಅಮೂಲಾಗ್ರವಾಗಿ ಒಂದು ಸಲ ಅಲ್ಲ, ೩-೪ ಸಾರಿ ಓದಿದ್ದೇನೆ. ರಾಜ್ಯದ ಜನತೆಯನ್ನು ಕಾಡಿಸತಕ್ಕಂಥ ಪ್ರಾಮಾಣಿಕವಾದ ಸಮಸ್ಯೆಗಳ ಬಗ್ಗೆ ಎಲ್ಲಿಯಾದರೂ ವಿಶೇಷವಾದ ಉತ್ತರ ಇದೆಯೇ ಎಂದು ಬಹಳ ಸೂಕ್ಷ್ಮವಾಗಿ ನೋಡಿದೆ. ಆದರೆ ಮೊಟ್ಟಮೊದಲನೇ ಪುಟದಿಂದ ಹಿಡಿದು ಕೊನೆಯ ಪುಟದವರೆಗೆ ಜನತೆಯ ಸಮಸ್ಯೆಗಳನ್ನು ಬಗೆಹರಿಸತಕ್ಕ ಉತ್ತರವಾಗಲೀ, ಪರಿಹಾರವಾಗಲೀ ಇದರಲ್ಲಿ ಇಲ್ಲವೆಂದು ನನ್ನ ದೃಢವಾದ ನಂಬಿಕೆ. ರಾಜ್ಯಪಾಲರ ಭಾಷಣವು ಸರ್ಕಾರ ತಾನು ಮುಂದೆ ಮಾಡತಕ್ಕಂಥ ಕಾರ್ಯಕ್ರಮಗಳ ಒಂದು ರೀತಿಯ ನೀಲಿ ನಕ್ಷೆ ಆಥವಾ ಪೆನ್ಸಿಲ್ ಸ್ಕೆಚ್ ರೀತಿಯಲ್ಲಿ ಇರಬೇಕು. ನಂತರ ಸರ್ಕಾರ ಬಜೆಟ್ ಅನ್ನು ನಮ್ಮ ಮುಂದೆ ಮಂಡಿಸುತ್ತದೆ. ರಾಜ್ಯಪಾಲರ ಭಾಷಣದಲ್ಲಿ ಹೇಳಿರತಕ್ಕ ಅದಕ್ಕೆ ಪೂರಕವಾದಂತಹ ವಿಧಿ ವಿಧಾನಗಳನ್ನು ಬಜೆಟ್‌ನಲ್ಲಿ ತೋರಿಸಬೇಕಾಗುತ್ತದೆ. ಆದರೆ ಈ ರೀತಿಯಾದಂತಹ ನೀಲಿ ನಕಾಶೆ ನಮ್ಮ ಮುಂದೆ ಇಲ್ಲ. ಇವೊತ್ತು ಜನರ ನಿರೀಕ್ಷೆ ಏನು ಇದೆ, ಅದು ಯಾವುದೂ ಇದರಲ್ಲಿ ಇಲ್ಲ ಎಂದು ಹೇಳುತ್ತೇನೆ. ಈ ಬಗ್ಗೆ ಒಂದೊಂದೇ ವಿಷಯಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ, ಚುನಾವಣೆಗಳ ಬಗ್ಗೆ ಮಾತನಾಡುತ್ತಾ, ಹೊಸ ಭರವಸೆಗಳು. ಆಶೋತ್ತರಗಳು ನಮ್ಮ ಜನತೆಯ ಮನಸ್ಸಿನಲ್ಲಿ ಇದೆ, ಎಂದು ಅವರೇ ಒಪ್ಪಿದ್ದಾರೆ. ಆದೇ ರೀತಿಯಲ್ಲಿ ಮುಂದೆ ಹೋಗುತ್ತಾ ಜನರ ಬೆಂಬಲದಿಂದ ಹಾಗೂ ಸಹಕಾರದಿಂದ ಮಾತ್ರ ಇದು ಸಾಧ್ಯ. ಎಂದಿದಾಗಿ ಮಾನ್ಯ ರಾಜ್ಯಪಾಲರು ಹೇಳಿದ್ದಾರೆ. ನನಗೆ ನನಗೆ ಆಶ್ಚರ್ಯ ಆಗುತ್ತಿದೆ. ಏಕೆಂದರೆ, ಇದು ಯಾವುದಕ್ಕೂ ಕೂಡ ಜಾಲನೆ ಕೊಡತಕ್ಕ ಸರ್ಕಾರದ ನೀತಿ ನಿರ್ದೇಶನಗಳು ಇದರಲ್ಲಿ ಯಾವುದೂ ಇಲ್ಲ. ಎಂತಹ ಪರಿಸ್ಥಿತಿಯಲ್ಲಿ ಈ ಸರ್ಕಾರ ಅಡಳಿತವನ್ನು ವಹಿಸಿಕೊಂಡಿದೆ ಎನ್ನತಕ್ಕದ್ದನ್ನು ನಾವು ಗಮನಿಸಬೇಕಾಗಿದೆ ಹಿಂದೆ ಇದ್ದಂತಹ ಸರ್ಕಾರಗಳಲ್ಲಿ ಕೆಲವು ಘಟನೆಗಳು ನಡೆದ ಕಾರಣ, ಈ ಬದಲಾವಣೆ ಆಗಿದೆ ಎಂದು ಹೇಳಿದ್ದಾರೆ. ಇದರ ಬಗ್ಗೆ ಮಾನ್ಯ ವಿರೋದ ಪಕ್ಷದ ನಾಯಕರು ಹೇಳಿದ್ದಾರೆ. ಯಾವ ಘಟನೆಗಳು ನಡೆದವು ಎನ್ನುವುದನ್ನು ನಿರ್ದಿಷ್ಟವಾಗಿ ಇದರಲ್ಲಿ ಹೇಳಬೇಕಾಗಿತ್ತು ಎನ್ನತಕ್ಕ ಮಾತನ್ನು ಅವರು ಹೇಳಿದ್ದಾರೆ. ನಾನು ಕೂಡ ಅದಕ್ಕೆ ಒತ್ತು ಕೊಟ್ಟು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಅದು ಯಾರಿಗೂ ಗೊತ್ತಿಲ್ಲದೆ ಇರತಕ್ಕ ಪರಿಸ್ಥಿತಿ ಇಲ್ಲ. ಹಿಂದೆ ನಡೆದಂತಹ ಘಟನಾವಳಿಗಳು ಜನರಿಗೆ ಗೊತ್ತಿಲ್ಲದೆ ಇಲ್ಲ. ಈ ರಾಜ್ಯದಲ್ಲಿರತಕ್ಕ ಭೂಮಿ ಯಾವ ರೀತಿಯಾಗಿದೆ ಎಂದು ಎಲ್ಲರಿಗೂ ಗೊತ್ತಿಲ್ಲದೆ ಇರತಕ್ಕ ವಿಚಾರ ಅಲ್ಲ. ರೈತರ ಬಗ್ಗೆ ಇವರು ಏನು ಹೇಳಿದ್ದಾರೆ, ಆದರೆ ಏನು ಪರಿಸ್ಥಿತಿ ಇದೆ, ಎಂಬ ಬಗ್ಗೆ ಒಂದು ಉದಾಹರಣೆ ಕೊಡುತ್ತೇನೆ. ನಿಜವಾಗಿ ಭೂಮಿ ಯಾರಿಗೆ ಸಿಗಬೇಕು ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಹತ್ತಾರು ವರ್ಷಗಳಿಂದ ಬಗರ್‌ಹುಕುಂ ಸಾಗುವಳಿ ಮಾಡಿಕೊಂಡು ಬಂದಿರತಕ್ಕವರು ಲಕ್ಷಾಂತರ ಜನ, ರೈತರು ಇದ್ದಾರೆ. ಅವರು ಯಾರಿಗೂ ಕೂಡ ಕಳೆದ ೫-೬ ವರ್ಷಗಳಲ್ಲಿ ಒಂದು ಅಂಗುಲ ಭೂಮಿ ಏತಕ್ಕೆ ಸಿಕ್ಕಲಿಲ್ಲ ?

ಆದರೆ ಯಾರಿಗೆ ಭೂಮಿ ಸಿಕ್ಕಿತು ಅಂದರೆ, ಬೆಂಗಳೂರು ಸುತ್ತ ಮುತ್ತ ಇರುವ ಭೂಮಿ ಬಾಂಬೆಯಲ್ಲಿರತಕ್ಕವರಿಗೆ, ದುಬೈನಲ್ಲಿರತಕ್ಕಂಥವರಿಗೆ ಹತ್ತಾರುವರೆ ಸಾವಿರ ಎಕರೆಗಳಷ್ಟು ಭೂಮಿ ಸಿಕ್ಕಿರತಕ್ಕಂಥಾದ್ದು ಈ ರಾಜ್ಯದ ಜನತೆಗೆ ಗೊತ್ತಿರತಕ್ಕ ವಿಚಾರ. ಹೀಗಾಗಿ ಜನತೆ ಈ ಚುನಾವಣೆಯಲ್ಲಿ ತೀರ್ಪನ್ನು ಕೊಟ್ಟಿದ್ದಾರೆ ಅದರ ಬಗ್ಗೆ ಇಲ್ಲಿ ತೀವ್ರವಾದಂಥ ಪ್ರತಿಪಾದನೆ ಯಾವರೀತಿ ಆಗಿದೆಯೆಂದರೆ...

ಶ್ರೀ ಎಂ. ಮಹದೇವ್.—ಮಾನ್ಯ ಬೈರೇಗೌಡರು, ಹಿಂದಿನ ಸರ್ಕಾರ ಬಾಂಬೆಯಲ್ಲಿರುವವರಿಗೆ ದುಬೈನಲ್ಲಿರುವವರಿಗೆ ಬೆಂಗಳೂರಿನಲ್ಲಿರುವ ಜಮೀನನ್ನು ಕೊಟ್ಟಿದೆ ಎಂದು ಹೇಳುತ್ತಿದ್ದಾರೆ. ಆಗ ನೀವು ಪ್ರತಿಭಟನೆಮಾಡಿ ಮಂತ್ರಿ ಪದವಿ ಬೇಡ ಎಂದು ಹೇಳಿ ಹೊರಗಡೆ ಬರಬೇಕಾಗಿತ್ತು. ಅದು ಬಿಟ್ಟು ಈಗ ಕರ್ನಾಟಕದ ಜನ ತೀರ್ಪು ಕೊಟ್ಟಮೇಲೆ ಹೇಳುತ್ತಿದ್ದೀರಿ.

ಶ್ರೀ ಸಿ. ಬೈರೇಗೌಡ.—ನಾವು ಏನು ಮಾಡಿದ್ದೇವೆ ಎನ್ನುವುದು ರಾಜ್ಯದ ಜನತೆಗೆ ಗೊತ್ತಿದೆ. ಅವರಿಗೆ ಗೊತ್ತಿಲ್ಲ, ಗೊತ್ತಿಲ್ಲದೆ ಹೇಳುವುದಕ್ಕೆ ಹೊರಟಿದ್ದಾರೆ.

ಶ್ರೀ ಎಂ. ಮಹದೇವ್.—ನನಗೆ ರಿಪೋರ್ಟ್ ರಿಂದಲೂ ಗೊತ್ತಿದೆ, ಟೇಪ್ ಹಗರಣದಿಂದಲೂ ಗೊತ್ತಿದೆ.

ಶ್ರೀ ಸಿ. ಬೈರೇಗೌಡ.—ಆಗಿರತಕ್ಕ ಅಕ್ರಮಗಳ ಬಗ್ಗೆ ಸರ್ಕಾರ ಏನು ಕ್ರಮ ತೆಗೆದುಕೊಳ್ಳುತ್ತದೆ ಎನ್ನತಕ್ಕಂಥ ನಿರ್ದಿಷ್ಟವಾದ ಅಭಿಪ್ರಾಯವನ್ನು ಸರ್ಕಾರ ಹೇಳಬೇಕಾಗಿತ್ತು. ಅದುದರಿಂದ ಇದರ

ಬಗ್ಗೆ ರಾಜ್ಯದ ಜನತೆಗೆ ಮತ್ತು ನನಗೂ ಅನುಮಾನ ಬರತಕ್ಕಂಥ ರೀತಿಯಲ್ಲಿ ಇಲ್ಲಿ ನಮೂದಾಗಿರ ತಕ್ಕಂಥಾದ್ದನ್ನು ಕಂಡು ನಾನು ವಿಷಾದಿಸುತ್ತೇನೆ. ಗ್ರಾಮಾಭಿವೃದ್ಧಿ ಗ್ರಾಮಮಟ್ಟದಲ್ಲಿ ಪ್ರಾರಂಭ ವಾಗಬೇಕು ಎಂಬ ಆಶಯವನ್ನು ಗಮನದಲ್ಲಿಟ್ಟುಕೊಂಡು 'ನನ್ನ ಸರ್ಕಾರವು ಕೃಷಿ ಬಲಯಕ್ಕೆ ವಿಶೇಷ ಆದ್ಯತೆ ನೀಡುತ್ತದೆ' ಎನ್ನತಕ್ಕಂಥ ಮಾತನ್ನು ಇದರಲ್ಲಿ ತಿಳಿಸಿದ್ದಾರೆ. ಇವತ್ತು ನಮ್ಮ ರಾಜ್ಯದಲ್ಲಿ ಕೃಷಿ ಅಭಿವೃದ್ಧಿ ಆಗಬೇಕಾದರೆ ಮುಖ್ಯವಾಗಿ ನೀರಾವರಿ ಆಗಬೇಕು. ಕೃಷಿಗೆ ಅತ್ಯವಶ್ಯಕವಾಗಿ ಬೇಕಾಗಿರತಕ್ಕಂಥಾದ್ದು ನೀರಾವರಿ. ಈ ನೀರಾವರಿ ಬಗ್ಗೆ ಮಾನ್ಯ ರಾಜ್ಯಪಾಲರು ಈ ರೀತಿ ಹೇಳಿದ್ದಾರೆ.

> ''ಕೃಷ್ಣ ಜಲಾನಯನ ಪ್ರದೇಶದಲ್ಲಿನ ಎಲ್ಲಾ ಯೋಜನೆಗಳು ನಿಗದಿತ ಅವಧಿಯೊಳಗೆ ಪೂರ್ಣಗೊಳ್ಳುವಂತೆ ಮಾಡಲು ಎಲ್ಲಾ ಪ್ರಯತ್ನಗಳನ್ನು ಮಾಡಲಾಗುತ್ತದೆ. ಹಾಗೆಯೇ, ಆರ್ಥಿಕ ನಿರ್ಬಂಧವಿಷ್ಟೇ ಇದ್ದರೂ, ನಿರ್ದಿಷ್ಟ ಕಾಲಮಿತಿಯೊಳಗೆ ಕಾವೇರಿ ಜಲಾನಯನ ಪ್ರದೇಶದಲ್ಲಿನ ಎಲ್ಲಾ ಯೋಜನೆಗಳನ್ನು ಪೂರ್ಣಗೊಳಿಸಲು ಸರ್ವ ಪ್ರಯತ್ನ ಮಾಡಲಾಗುತ್ತದೆ.''

ಎನ್ನತಕ್ಕಂಥ ಮಾತನ್ನು ಹೇಳಿದ್ದಾರೆ. ಬಚಾವತ್ ತೀರ್ಪಿನ ಪ್ರಕಾರ ಅಪ್ಪರ್‌ಕೃಷ್ಣ ಪ್ರಾಜೆಕ್ಟ್‌ನಲ್ಲಿರ ತಕ್ಕಂಥ ನಮ್ಮ ಪಾಲಿನ ನೀರನ್ನು ಉಪಯೋಗಿಸಿಕೊಳ್ಳುವುದಕ್ಕೆ ಇನ್ನು ೯ ವರ್ಷಗಳ ಅವಧಿ ಇದೆ. ಒಂದು ಅಂದಾಜು ಪ್ರಕಾರ ಇದಕ್ಕೆ ಆರು ಸಾವಿರ ಕೋಟಿ ರೂಪಾಯಿಗಳು ಬೇಕಾಗುತ್ತದೆ. ಎಸ್ಕಲೇಷನ್ ಮುತ್ತೊಂದು ಲೆಕ್ಕಹಾಕಿದರೆ ಪ್ರತಿ ವರ್ಷ ಇದಕ್ಕೆ ಸುಮಾರು ೭೦೦-೮೦೦ ಕೋಟಿ ರೂಪಾಯಿಗಳನ್ನು ನಾವು ಒದಗಿಸಬೇಕಾಗುತ್ತದೆ. ಇಷ್ಟೊಂದು ಬೃಹತ್ ಪ್ರಮಾಣದ ಹಣವನ್ನು ಒದಗಿಸಬೇಕಾದ ಪರಿಸ್ಥಿತಿ ಇರುವಾಗ ಇದರ ಬಗ್ಗೆ ನಿರ್ದಿಷ್ಟವಾದ ನಿಲುವನ್ನು ತಾಳಬೇಕಾಗಿತ್ತು. ಆದರೆ ಇದರಲ್ಲಿ ಸರ್ಕಾರದ ನಿರ್ದಿಷ್ಟವಾದ ನಿಲುವು ಯಾವುದೂ ಇಲ್ಲದೇ ಇರುವುದನ್ನು ಕಂಡು ನಾನು ವಿಷಾದಿಸುತ್ತೇನೆ. ಇದಕ್ಕಿಂತ ವಿಷಮ ಪರಿಸ್ಥಿತಿ ಇರತಕ್ಕಂಥದ್ದು ಎಂದರೆ, ಕಾವೇರಿ ಕಣಿವೆಯಲ್ಲಿ ಆಗಬೇಕಾಗಿರತಕ್ಕಂಥ ಕೆಲಸ. ತಮಿಳುನಾಡಿನಲ್ಲಿರುವ ತಂಜಾವೂರಿನ ಪ್ರದೇಶಕ್ಕೆ ಕಾವೇರಿ ಜಲಾನಯನ ಪ್ರದೇಶದಿಂದ ನಾವು ಪ್ರತಿ ವರ್ಷ ನೀರನ್ನು ಕೊಡುತ್ತಾ ಇದ್ದೇವೆ. ಇದರ ಬಗ್ಗೆ ತಮ್ಮಲ್ಲೂ ಹೆಚ್ಚಿನ ಮಾಹಿತಿ ಇದೆ. ಏಕೆ ಇಂತಹ ಪರಿಸ್ಥಿತಿ ಉದ್ಭವವಾಗಿದೆಯೆಂದರೆ ನಮಲ್ಲಿರತಕ್ಕಂಥ ಯೋಜನೆಗಳ ಆಚ್ಚುಕಟ್ಟು ಪ್ರದೇಶಗಳ ಅಭಿವೃದ್ಧಿ ಅತಿ ಜರೂರಾಗಿ ಆಗಬೇಕಾಗಿರತಕ್ಕಂಥದ್ದು. ಇದಕ್ಕಿಂತ ಮುಖ್ಯವಾದುದು ಕಾವೇರಿ ಕಣಿವೆಯಲ್ಲಿರತಕ್ಕಂಥ ಯೋಜನೆಗಳು. ಮುಂದೆ ನಮಗೆ ಎಷ್ಟು ನೀರು ಬೇಕು, ಆ ನೀರನ್ನು ಬಳಕೆ ಮಾಡಿಕೊಳ್ಳಬೇಕಾದರೆ ಇದರ ಬಗ್ಗೆ ಗಮನ ಕೊಡಬೇಕು. ನಮಗೆ ಕಾಲದ ವಿತಿ ಇಲ್ಲ. ಏಕೆಂದರೆ, ಇವತ್ತಿನ ಪತ್ರಿಕೆಯಲ್ಲಿ, ಮತ್ತು ನಿನ್ನೆಯ ಪತ್ರಿಕೆಯನ್ನು ನೋಡಿದರೆ ಗೊತ್ತಾಗುತ್ತದೆ. ತಮಿಳುನಾಡಿನ ಮುಖ್ಯ ಮಂತ್ರಿಗಳು ಈಗಾಗಲೇ ಹೇಳಿದ್ದಾರೆ. ಏನೆಂದರೆ, ಕಾವೇರಿ ನೀರಿನ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಒಂದು ನ್ಯಾಯ ಮಂಡಲಿಯನ್ನು ರಚನೆ ಮಾಡಬೇಕೆಂ. ಅದರ ಮೂಲಕ ನೀರಿನ ಹಂಚಿಕೆಯಾಗಬೇಕೆಂದು ಅವರು ಒತ್ತಾಯ ಮಾಡುತ್ತಿದ್ದಾರೆ. ನ್ಯಾಯ ಮಂಡಲಿಯನ್ನು ರಚನೆ ಮಾಡಿದರೆ, ನಮ್ಮ ರಾಜ್ಯದ ಹಿತವನ್ನು ಯಾವ ರೀತಿ ಕಾಪಾಡುತ್ತೀರಿ. ನ್ಯಾಯ ಮಂಡಲಿ ಕೈಗೆ ಈ ವಿಚಾರ ಹೋದರೆ, ಪರಿಸ್ಥಿತಿ ಏನಾಗುತ್ತದೆಂಬುದನ್ನು ತಾವು ಯೋಚನೆ ಮಾಡಬೇಕು ಕಾವೇರಿ ಕಣಿವೆಯಲ್ಲಿರತಕ್ಕ ಎಲ್ಲಾ ಯೋಜನೆಗಳನ್ನು ಕಾಲವಿಳಂಬವಿಲ್ಲದೆ ಅತಿ ಜಾಗ್ರತೆಯಾಗಿ ನಾವು ಮುಗಿಸಬೇಕು. ಆದರೆ ಇದರ ಬಗ್ಗೆ ಯಾವ ವಿಧವಾದ ಭರವಸೆಯೂ ರಾಜ್ಯಪಾಲರ ಭಾಷಣದಲ್ಲಿ ಇಲ್ಲ. ನಮ್ಮ ರಾಜ್ಯದಲ್ಲಿರತಕ್ಕ ಸರ್ಕಾರಿ ಕಾರ್ಖಾನೆಗಳ ಪೈಕಿ ಸುಮಾರು ೩೨ ಕಾರ್ಖಾನೆಗಳು ಅಪಾರವಾದಂಥ ನಷ್ಟವನ್ನು ಅನುಭವಿಸಿದೆ ಕಳೆದ ವರ್ಷ ಅಂದರೆ ೮೮-೮೯ನೇ ಸಾಲಿನಲ್ಲಿ ೧೫೧.೨೬ ಕೋಟಿ ರೂಪಾಯಿಗಳಷ್ಟು ನಷ್ಟವಾಗಿದೆ. ಒಟ್ಟು ಅಕ್ಯುಮುಲೇಟೀವ್ ಲಾಸೆಸ್ ೩೧ರಷ್ಟು-೯೯ ರವರೆಗೆ ೫೮೨.೪೪ ಕೋಟಿಗಳು ಇದರ ಬಗ್ಗೆ ಸರ್ಕಾರ ನಿರ್ಧಾರ ಮಾಡುವುದಕ್ಕೆ ಸಾಧ್ಯವಿಲ್ಲ. ನಷ್ಟ ಅನುಭವಿಸುವುದಕ್ಕೆ ಕಾರಣ ಏನು? ಇದನ್ನು ಸರಿಪಡಿಸುವುದಕ್ಕೆ ಸರ್ಕಾರದ ಕಾರ್ಯಕ್ರಮ ಏನು ಎನ್ನುವುದನ್ನು ಸರ್ಕಾರದವರು ಹೇಳಬೇಕಾಗಿತ್ತು. ಆದರೆ, ಇದರ ಬಗ್ಗೆ ಒಂದು ಶಬ್ದವನ್ನು ಪ್ರಸ್ತಾಪ ಮಾಡಿಲ್ಲವೆಂದು ಬಹಳ ವಿಷಾದದಿಂದ ಹೇಳಂತ್ತಿದ್ದೇನೆ. ಶಿಕ್ಷಣದ ಬಗ್ಗೆ ಒಂದು ಮಾತನ್ನು ಹೇಳುವುಕ್ಕೆ ಇಷ್ಟಪಡುತ್ತೇನೆ. ಮಾನ್ಯ ಮುಖ್ಯ ಮಂತ್ರಿಗಳು ತಮ್ಮ ಕ್ಷೇತ್ರದಲ್ಲಿ ೧೬೦ ಮಕ್ಕಳಿಗೆ ಒಬ್ಬ ಉಪಾಧ್ಯಾಯರು ಇದ್ದಾರೆಂದು ಮೊನ್ನೆ ಹೇಳಿದ್ದಾರೆ ಇದು ರಾಜ್ಯದ ಎಲ್ಲಾ ಕಡೆ ಇರತಕ್ಕ ಪರಿಸ್ಥಿತಿ ಕೂಡ ಆಗಿದೆ. ಆದರೆ ಈ ವ್ಯವಸ್ಥೆಯ ಮಾರ್ಪಾಡಿನ ವಿಚಾರದಲ್ಲಿ ಕೂಡ ಒಂದು ಮಾತನ್ನು ಕೂಡ ಹೇಳಿರುವುದು ಅತ್ಯಂತ ಶೋಚನೀಯ. ಬಹಳ ಮುಖ್ಯವಾಗಿ ಗ್ರಾಮೀಣ ಪ್ರದೇಶಗಳಲ್ಲಿರತಕ್ಕ ಪ್ರಾಥಮಿಕ ಹಂತದಲ್ಲಿರತಕ್ಕ ಶಿಕ್ಷಣದ ಮಟ್ಟವನ್ನು

ಯಾವ ರೀತಿ ಸುಧಾರಣೆ ಮಾಡುತ್ತೀರಾ ಎನ್ನುವ ಬಗ್ಗೆ ಹೇಳಬೇಕಾಗಿತ್ತು. ಮಾನ್ಯ ಮುಖ್ಯ ಮಂತ್ರಿಗಳು ಒಳ್ಳೆಯ ಆನುಭವಶಾಲಿಗಳು.

ಅಧ್ಯಕ್ಷರು.—ತಾವು ಮುಗಿಸಬೇಕು ಇನ್ನೂ ಎಂ ಇ.ಎಸ್. ನವರು ಇದ್ದಾರೆ ಎ ಐ.ಡಿ.ಎಂ.ಕೆ.ಯವರು ಇದ್ದಾರೆ. ಸಿ ಬೈರೆಗೌಡರಾಜ್ಯದ ರಾಜಸ್ವ ಗಣನೀಯ ಪ್ರಮಾಣದಲ್ಲಿ ಸೋರಿಹೋಗುತ್ತಿರುವುದು ತಿಳಿದು ಬಂದಿದೆಯೆಂದು ಹೇಳಿದ್ದಾರೆ. ಇದಕ್ಕೆ ಪರಿಹಾರ ಏನು? ನಿನ್ನೆ ಕಾಗೋಡು ತಿಮ್ಮಪ್ಪನವರು ಎಕ್ಸೈಜ್ ಬಾಬಿನಲ್ಲಿ ಬೈರೇಗೌಡರು ಒಂದು ಕೋಟಿ ಸೋರಿ ಹೋಗುತ್ತದೆಂದು ಹೇಳಿದರು ಎಂದು ಜ್ಞಾಪಿಸಿದರು. ಇಷ್ಟರಲ್ಲಿ ನಾನು ಅದನ್ನು ಸಾಬೀತು ಮಾಡುವುದಕ್ಕೆ ತಯಾರಿದ್ದೇನೆ. ಸರ್ಕಾರವನ್ನು ಯಾರೇ ನಡೆಸಲಿ, ಈ ಸರ್ಕಾರದ ಮೇಲೂ ನನಗೆ ಸಂಶಯ ಹೋಗಿಲ್ಲ. ಅಧ್ಯಕ್ಷರೆ, ಈವರೆಗೂ ಕೂಡ ಹೆಂಡದ ವಾಸನೆ ಬರುತ್ತಿದೆ ಎನ್ನುವ ಸಂಶಯ ನನಗಿದೆ. ಈ ಮೊದಲು ಕೂಡ ನಾನು ಈ ವಿಚಾರದಲ್ಲಿ ಅಂದರೆ ನಮ್ಮ ಸರ್ಕಾರ ಇದ್ದಾಗಲೂ ತೀವ್ರವಾದಂಥ ಟೀಕೆ ಮಾಡಿದ್ದು ಉಂಟು.

ಶ್ರೀ ಕಾಗೋಡು ತಿಮ್ಮಪ್ಪ.— ಇದನ್ನು ಎಲ್ಲಾ ನಾಯಕರ ಜೊತೆಯಲ್ಲಿ ಮಾತನಾಡಿಕೊಂಡು ಬಂದಿದ್ದಿರೇನು.

ಶ್ರೀ ಸಿ. ಬೈರೇಗೌಡ.— ನಾನು ಇಲ್ಲಿ ಮಾತನಾಡಬೇಕಾದರೆ ಯಾರ ಜೊತೆಯೂ ಮಾತನಾಡಿಕೊಂಡು ಬಂದಂ ಮಾತನಾಡಬೇಕಾದ ಅವಶ್ಯಕತೆ ನನಗಿಲ್ಲ. ನಿರ್ಭಯವಾದ ರೀತಿಯಲ್ಲಿ ನಾವು ಇಲ್ಲಿ ಮಾನಾಡತಬಹುದು. ನಾವು ಏನೆಂದು ಪ್ರಮಾಣ ವಚನವನ್ನು ಸ್ವೀಕಾರ ಮಾಡಿದ್ದೇವೆಂಬುದನ್ನು ಮಾನ್ಯ ಕಾಗೋಡು ತಿಮ್ಮಪ್ಪನವರಿಗೆ ನಾನು ಹೇಳಿಕೊಡಬೇಕೆ? ಆದ್ದರಿಂದ, ಅಲ್ಲಿ ಇಲ್ಲಿ ಹೋಗಿ ಮಾತನಾಡಿಕೊಂಡುಬಂದು ಇಲ್ಲಿ ಹೇಳಬೇಕಾದ ಅವಶ್ಯಕತೆಯಿಲ್ಲ ಎಂದು ನಾನು ಮಾನ್ಯ ಕಾಗೋಡು ತಿಮ್ಮಪ್ಪನವರಿಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ಅಧ್ಯಕ್ಷರೆ, ಇದರ ವಾಸನೆ ಎಲ್ಲಿಯವರೆಗೆ ಹೋಗಿದೆ ಅಂದರೆ, ಹಿಂದೆ ನಮ್ಮ ಸರ್ಕಾರದಲ್ಲಿಯೂ ಕೂಡ ಇದರ ವಾಸನೆ ಸಂಪೂರ್ಣವಾಗಿ ಇತ್ತು. ರಾಜ್ಯಪಾಲರ ಆಡಳಿತ ಬಂದಾಗಲೂ ಕೂಡ ವಾಸನೆ ಹೋಗಲಿಲ್ಲ. ಹೆಂಡ ಸಾರಾಯಿ ವಾಸನೆ ಹೋಗಲಿಲ್ಲ, ರಾಜಭವನದ ಸುತ್ತಲೂ ವಾಸನೆ ಇತ್ತು. ಇವೊತ್ತಿನ ದಿವಸ ಇದು ಯಾವ ರೀತಿ ನಡೆದಿದೆ ಎನ್ನುವುದನ್ನು ಹೇಳುತ್ತೇನೆ. ಇವೊತ್ತು ಸೆಕೆಂಡ್ಸ್ ಮಾರಾಟ ತಡೆಗಟ್ಟುವುದನ್ನು ಸರ್ಕಾರದವರು ಒಪ್ಪಿದ್ದಾರೆ. ಅಂದರೆ ಸೆಕೆಂಡ್ಸ್ ಇದೆ ಎನ್ನುವುದನ್ನು ಮಾನ್ಯ ರಾಜ್ಯಪಾಲರು ಸಹ ಒಪ್ಪಿರುವುದರಿಂದ ಅಷ್ಟರಮಟ್ಟಿಗೆ ಸಂತೋಷವನ್ನು ಸೂಚಿಸಬಹುದು. ಇದಕ್ಕೆ ಪರಿಹಾರವಾಗಿ ಎಂ.ಎಸ್.ಐ.ಎಲ್, ಎಂಬ ಸಂಸ್ಥೆಯನ್ನು ಹುಟ್ಟುಹಾಕಿದ್ದಾರೆ. ಇದರ ಮೂಲಕ ಹಂಚಿಕೆ ಮಾಡತಕ್ಕ ವ್ಯವಸ್ಥೆ ಮಾಡಬೇಕೆಂಬ ಉದ್ದೇಶ ಸರ್ಕಾರಕ್ಕೆ ಈಗಾಗಲೇ ಇದೆ. ನನ್ನ ಅಭಿಪ್ರಾಯದಲ್ಲಿ ಇದು ಸೆಕೆಂಡ್ಸ್‌ನ್ನು ಜನರೇಟ್ ಮಾಡಲಿಕ್ಕೆ ಇನ್ನೊಂದು ಹಂದರ ಮೂಲಭೂತವಾಗಿ ಸೆಕೆಂಡ್ಸ್ ನಿಲ್ಲಿಸಲಿಕ್ಕೆ ಮತ್ತೊಂದು ಸಂಸ್ಥೆಯನ್ನು ಹುಟ್ಟುಹಾಕಿರುವುದು ಸಾಧನೆ ಅಲ್ಲ. ಮುಖ್ಯಮಂತ್ರಿಗಳ ಸ್ಥಾನದಲ್ಲಿ ಯಾರು ಕುಳಿತಿರುತ್ತಾರೆ ಅಂತಹವರು ಒಂದೇ ಒಂದು ಕ್ಷಣದಲ್ಲಿ ಇದನ್ನು ನಿಲ್ಲಿಸಬಹುದು. ಈ ಸೆಕೆಂಡ್ಸ್ ಮಾರಾಟ ನಿಲ್ಲಿಸುವುದಕ್ಕೆ ಮಾನ್ಯ ಮುಖ್ಯ ಮಂತ್ರಿಗಳಾಗಿರುವವರಿಗೆ ಒಂದೇ ಒಂದು ಸೆಕೆಂಡ್ ಸಾಕು. ಅದಕ್ಕಿಂತಲೂ ಹೆಚ್ಚು ಸಮಯದ ಅವಶ್ಯಕತೆ ಇಲ್ಲ. ಅಲ್ಲಿರತಕ್ಕ ಎಕ್ಸೈಸ್ ಕಮಿಷನರ್ ಕರೆದು, ಒಂದು ಒಂದೇ ಬಾಟಲ್ ಟ್ಯಾಕ್ಸ್ ಇಲ್ಲದೇ ಹೊರಗಡೆ ಬಂದಿರುವಂತಾದ್ದು ಏನಾದರೂ ಕಂಡರೆ, ನಿಮ್ಮ ಬಗ್ಗೆ ಸ್ಥಳದಲ್ಲಿಯೇ ಉಗ್ರವಾದ ಕ್ರಮ ತೆಗೆದುಕೊಳ್ಳುತ್ತೇನೆ ಎನ್ನುವ ಒಂದು ಮಾತನ್ನು ಹೇಳಿದರೆ ಸಾಕು. ಒಂದು ಕ್ಷಣದಲ್ಲಿಯೇ ಸೆಕೆಂಡ್ಸ್ ಮಾರಾಟ ನಿಂತುಹೋಗುತ್ತದೆ. ಅದನ್ನು ಬಿಟ್ಟು ಈ ಎಲ್ಲಾ ಡೊಂಬರಾಟ ಈ ಸೆಕೆಂಡ್ ವಿಚಾರದಲ್ಲಿ ನಡೆಯುತ್ತಿದೆ. ಇವೊತ್ತು ಇದರಿಂದ ಜನತೆಯನ್ನು ನಂಬಿಸುತ್ತೇವೆ ಎನ್ನುವ ಪ್ರಯತ್ನ ಏನು ನಡೆಯುತ್ತಿದೆ ಅದು ಆಗಬಾರದು, ಇವರೇನಾದರೂ ನಮಗೆ ೧೭೭ಜನರ ಭೀಮ ಬಲ ಇದೆ. ಏತಕ್ಕೆ ಹೆದರಿಕೊಳ್ಳಬೇಕು ಎಂದು ಹೇಳುವುದಕ್ಕೆ ಬದಲು ಇವರಿಗೆ ರಾಜಕೀಯವಾಗಿ ಇಚ್ಛಾಶಕ್ತಿ ಇದ್ದರೆ ಈ ಡೊಂಬರಾಟವನ್ನು ನಿಲ್ಲಿಸಬೇಕೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇವೆ. ಅಧ್ಯಕ್ಷರೇ ನಿನ್ನ ರಾಜ್ಯಪಾಲರ ಆಡಳಿತದಲ್ಲಿ ಏನು ನಡೆದಿದೆ ಅಂದರೆ...

ಅಧ್ಯಕ್ಷರು — ಈಗ ಹೊಸ ಸರ್ಕಾರ ಬಂದಿದೆ. ಈ ಹೊಸ ಸರ್ಕಾರ ಮುಂದೆ ಏನು ಮಾಡುತ್ತದೆಂದು ರಾಜ್ಯಪಾಲರು ಹೇಳಿದ್ದಾರೆ. ಆದ್ದರಿಂದ ಈಗ ಹಿಂದೆ ಆದಂಥ ರಾಜ್ಯಪಾಲರ ಆಡಳಿತ ವಿಶ್ಲೇಷಣೆ ಬೇಕಾಗಿಲ್ಲ.

ಶ್ರೀ ಸಿ. ಬೈರೇಗೌಡ.— ಸಂಪನ್ಮೂಲ ಎಲ್ಲಿ ಸೋರಿ ಹೋಗುತ್ತವೆ ಅದನ್ನು ಹೇಳಬೇಕಾಗುತ್ತದೆ. ಈ ಎಕ್ಸೈಜ್ ಬಾಬಿನಲ್ಲಿ ಹೇಳುವುದಾದರೆ, ರಾಜ್ಯದಲ್ಲಿ ತಯಾರಾಗತಕ್ಕ ಮದ್ಯದ ಮೇಲೆ ವಿಪರೀತ ಸೇಲ್ಸ್‌ಟ್ಯಾಕ್ಸ್ ಹಾಕಿ ಹೊರಗಡೆಯಿಂದ ಬರುತ್ತಿರತಕ್ಕ ಮದ್ಯದ ಮೇಲೆ ಕಡಿಮೆ ಸೇಲ್ಸ್‌ಟ್ಯಾಕ್ಸ್ ಹಾಕಿರತಕ್ಕದ್ದರ ಔಚಿತ್ಯವಾದರೂ ಏನು?

ಇದರ ಗುಟ್ಟು ಏನು ಎಂದು ನಾನು ಕೇಳಬಯಸುತ್ತೇನೆ. ನಾನು ಕೆಲವು ಅಂಕಿ ಅಂಶಗಳನ್ನು ಈ ಬಗ್ಗೆ ಕೊಡುವುದಕ್ಕೆ ತಯಾರಿದ್ದೇನೆ. ನಾನು ಈ ಮಾತನ್ನು ಹೇಳುತ್ತಿರಬೇಕಾದರೆ, ಇದರ ವಾಸನೆ ರಾಜಭವನದಲ್ಲೂ ಕೂಡ ಹೋಗಿಲ್ಲವೆಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ನಮ್ಮ ರಾಜ್ಯದಲ್ಲಿ ತಯಾರಾಗತಕ್ಕ ಮದ್ಯದ ಮೇಲೆ ಸೇಲ್ಸ್ ಟ್ಯಾಕ್ಸನ್ನು ವಿಪರೀತವಾಗಿ ಹೇರಿ ಹೊರ ರಾಜ್ಯದಿಂದ ಬರತಕ್ಕ ಮದ್ಯದ ಮೇಲೆ ಸೇಲ್ಸ್‌ಟಾಕ್ಸ್‌ನ್ನು ಕಡಿಮೆ ಹಾಕಿರತಕ್ಕದ್ದರ ಗುಟ್ಟಾದರೂ ಏನು ಎಂಬುದನ್ನು ಕೇಳಬಯಸುತ್ತೇನೆ. ಪೂರ್ಣ ವಿರೋಧ ಪಕ್ಷದ ನಾಯಕರು ಮಾತನಾಡುತ್ತಾ ಈಗಿನ ವಿರೋಧಾಭಕರು ಯಾರು ಎಂಬುದು ಸಾಬೀತಾಯಿತು ಎಂದು ಹೇಳಿದ್ದಾರೆ. ನಾನು ಅವತ್ತು ಮಾತನಾಡುವಾಗಲೇ ಹೇಳಿದೆ, ಇದು ರಾಜ್ಯದ ಜನತೆಗೇ ಗೊತ್ತಿದೆ ಅಂತ. ಸ್ವಾಮಿ, ಇದು ನನ್ನ ಅಭಿಪ್ರಾಯವಲ್ಲ. ಮೊನ್ನೆಯ ಪ್ರಜಾವಾಣಿ ಪತ್ರಿಕೆಯಲ್ಲಿ (ತಾ: ೨೦-೧೨-೮೯) ಒಂದು ಲೇಖನ ಬಂದಿದೆ. ತಾವು ದಯವಿಟ್ಟು ಸಹಕರಿಸಿ ನನಗೆ ಅವಕಾಶವನ್ನು ನೀಡಿದರೆ ಅದನ್ನು ನಾನು ಓದಿ ಹೇಳುತ್ತೇನೆ. ಅದು ಈ ರೀತಿ ಇದೆ.—

"ನೂತನ ಪ್ರಧಾನಿ ವಿ.ಪಿ. ಸಿಂಗ್‌ರವರು ಮಾಜಿ ಪ್ರಧಾನಿ ರಾಜೀವ್ ಗಾಂಧಿಯವರ ಭ್ರಷ್ಟತೆ ಅವ್ಯವಹಾರಗಳ ವಿರುದ್ಧ ಹೋರಾಟ ಮಾಡಿದರು. ಅಷ್ಟೇ ಅಲ್ಲ ಇನ್ನೊಬ್ಬ ಅಷ್ಟೇ ಭ್ರಷ್ಟತೆಯ ಆಪಾದನೆ ಹೊತ್ತ ಅಷ್ಟೇ ಅವ್ಯವಹಾರಗಳಲ್ಲಿ ಮುಳುಗಿದ್ದರೆನ್ನಲಾದ ಕರ್ನಾಟಕದ ಮಾಜಿ ಮುಖ್ಯ ಮಂತ್ರಿಯವರೊಡನೆ ಸೇರಿ ಕಾಂಗ್ರೆಸ್ ಪರ್ಯಾಯ ಪಕ್ಷ ಕಟ್ಟಲು ಮುಂದಾದರು. ಕೇಂದ್ರದಲ್ಲಿ ವಿ.ಪಿ. ಸಿಂಗ್‌ರವರು ಭ್ರಷ್ಟತೆಯ ವಿರುದ್ಧ ಮಾಡಿದ ಹೋರಾಟವನ್ನೇ ಕರ್ನಾಟಕದ ಮಾಜಿ ಮಂತ್ರಿ ದೇವೇಗೌಡರು ಮಾಜಿ ಮುಖ್ಯ ಮಂತ್ರಿ ಹೆಗಡೆಯವರ ಆರೋಪಿತ ಭ್ರಷ್ಟತೆ, ಅವ್ಯವಹಾರಗಳ ವಿರುದ್ಧ ಹೋರಾಟ ಮಾಡಿದರು. ಈ ರೀತಿ ಹೋರಾಟ ಮಾಡುವಾಗ ಗೌಡರು ಇನ್ನೊಬ್ಬ ಆಪಾದಿತ ಭ್ರಷ್ಟರ ಜೊತೆ ಸೇರಲಿಲ್ಲ. ತಮ್ಮ ಮೂಲ ಪಕ್ಷವಾದ ಜನತಾ ಪಕ್ಷದಲ್ಲೇ ಉಳಿದು ನೈತಿಕ ಬಲವಿರುವ ಕೆಲವೇ ಮಂದಿಯೊಂದಿಗೆ ಹೋರಾಟ ಮಾಡಿದರು.

ಇಲ್ಲಿ ಮಾತದಾರರು ಕೆಲವು ಅಂಶಗಳನ್ನು ಗಮನಿಸಬೇಕು. ವಿ. ಪಿ. ಸಿಂಗ್‌ರವರ ಹೋರಾಟವನ್ನು ಮೆಚ್ಚಿಕೊಂಡ ಜನತೆ ಅವರನ್ನು ಪುರಸ್ಕರಿಸಿ ಗುದ್ದುಗೆಗೆ ಏರಿಸಿತು. ಇಲ್ಲಿ ಅದೇ ರೀತಿಯ ಹೋರಾಟವನ್ನು ಮಾಡಿದ ದೇವೇಗೌಡರ ಪಕ್ಷವನ್ನು ಹೊಡೆದರು. ಕಾಂಗ್ರೆಸ್ ಪರ್ಯಾಯ ಪಕ್ಷವನ್ನು ಕಟ್ಟಲು ಹೊರಟವರಿಗೆ ಅಡ್ಡಗಾಲು ಹಾಕಿದರು. ಕಾಂಗ್ರೆಸ್ ವಿಜೆಂಟ್, ಮುಖ್ಯ ಮಂತ್ರಿಯ ಪದವಿಯ ಆಸೆ ಮತ್ತು ಕರ್ನಾಟಕದ ಚರಣ ಸಿಂಗ್ ಎಂದೆಲ್ಲಾ ಬಿರುದುಗಳನ್ನು ನೀಡಿದ ಲ್ಲದೆ ಚುನಾವಣೆಯಲ್ಲೂ ಜನತೆ ಸೋಲಿಸಿದರು. ವಿ. ಪಿ. ಸಿಂಗರು ಮಾಡಿದ ಕೆಲಸವೆಂದರೆ ಒಬ್ಬ ಕಳ್ಳನನ್ನು ಹಿಡಿಯಲು ಮತ್ತೊಬ್ಬ ಕಳ್ಳನ ಜೊತೆ ಸೇರಿದರು ಎನ್ನಬಹುದೆ?...

ಅಧ್ಯಕ್ಷರು.— ಸಾಕು ನಿಲ್ಲಿಸಿ...

(ಗೊಂದಲ)

"ಜನತಾದಳ ಪಕ್ಷವು ಕಾಂಗ್ರೆಸ ಭ್ರಷ್ಟ ಆಡಳಿತವನ್ನು ಚಾಕು-ಚೂರಿ ಸಂಸ್ಕೃತಿಯನ್ನೂ ವಿರೋಧಿಸಿ ತಮ್ಮ ಪಕ್ಷ ಇಂತಹ ಕೆಟ್ಟ ಸಂಸ್ಕೃತಿ ಭ್ರಷ್ಟ ಆಡಳಿತದಿಂದ ಹೊರತು ಎಂದು ಹೇಳಿ ಕೇಂದ್ರದಲ್ಲಿ ಗುದ್ದುಗೆಗೆ ಏರಿತು. ಆದರೆ...

ಶ್ರೀ ಪಿ.ಜಿ.ಆರ್. ಸಿಂಧ್ಯ.— ನಿಮ್ಮ ನಾಯಕರನ್ನು ಎರಡೂ ಕಡೆಯಲ್ಲಿ ಜನರು ಸೋಲಿಸಿದ್ದಾರೆ. ಮಾನ್ಯ ಅಧ್ಯಕ್ಷರೇ, ಇವರಿಗೆ ನಾಚಿಕೆಯಾಗಬೇಕು. ಇವರ ನಾಯಕರನ್ನು ಜನರು ಎರಡೂ ಕಡೆ ತಿರಸ್ಕಾರ ಮಾಡಿದ್ದಾರೆ. ಮತ್ತೆ ನಾಚಿಕೆ ಇಲ್ಲದೆ ಇಲ್ಲಿ ಬಂದು ಮಾತನಾಡುತ್ತಿದ್ದಾರೆ.

ಶ್ರೀ ಸಿ. ಬೈರೇಗೌಡ.—"ಆದರೆ ಜನತಾದಳ ಪಕ್ಷದ ಸರ್ಕಾರವೇನೂ ಕಾಂಗ್ರೆಸ್ ಪಕ್ಷದ ಚಾಕು-ಚೂರಿ ಸಂಸ್ಕೃತಿಯಿಂದಾಗಲಿ, ಭ್ರಷ್ಟ ಆಡಳಿತದಿಂದಾಗಲೀ ಯಾವ ರೀತಿಯಲ್ಲೂ ಬೊರತಾಗಿಲ್ಲ. ಏಕೆಂದರೆ ಸ್ವತಃ ಹೆಗಡೆಯವರಿಂದ ಹಿಡಿದು ಅವರು ಆಪ್ತ ಶಿಷ್ಯವೃಂದದ ಪರಿಲ್ಲರೂ ಆದೇ ಕಾಂಗ್ರೆಸ್ ಚಾಕು-ಚೂರಿ ಸಂಸ್ಕೃತಿಯ ಮೂಲದವರೇ, ಭ್ರಷ್ಟ ಆಡಳಿತ ಗಾರರೇ ಆಗಿದ್ದಾರೆ. ಕೆಲವುಮಂದಿ ಕ್ರಿಮಿನಲ್‌ಗಳೂ ಇದ್ದಾರೆ. ಚುನಾವಣೆಯಲ್ಲೂ ಸ್ಪರ್ಧಿಸಿದ್ದಾರೆ. ಅಂದ ಮೇಲೆ ಜನತಾ ದಳ ಪಕ್ಷ ಕಾಂಗ್ರೆಸ್ ಹೇಗೆ? ಯಾವ ರೀತಿಯಲ್ಲಿ ಪರ್ಯಾಯ ಪಕ್ಷವಾಗಿದೆ? ಅಥವಾ ಅದು ಕಾಂಗ್ರೆಸ್‌ಗೆ ಬದಲಿ ಪಕ್ಷವಾಗಿದೆಯೇ ಎಂಬುದನ್ನು ಬುದ್ಧಿವಂತವಂತದಾರರೇ ವಿವೇಚಿಸಬೇಕು"...

ಸ್ವಾಮಿ, ಇದು ನನ್ನ ಅಭಿಪ್ರಾಯವಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯ.— ನಾನು ಇವರ ಚೇಲ ಅಲ್ಲ....ನಾಚಿಕೆ ಆಗಬೇಕು. ತಲೆತಗ್ಗಿಸಬೇಕು.

ಶ್ರೀ ಸಿ. ಬೈರೇಗೌಡ.— ನಮಗಲ್ಲ, ನಿಮಗೆ ನಾಚಿಕೆಯಾಗಬೇಕು, ಜನರೇ ಹೇಳಬೇಕು, ಯಾರು ತಲೆ ತಗ್ಗಿಸಬೇಕು ಅಂತ...

(ಗೊಂದಲ)

ಶ್ರೀ ಪಿ.ಜಿ.ಆರ್. ಸಿಂಧ್ಯ.— ನೀವೇ ತಲೆ ತಗ್ಗಿಸಬೇಕು. ನೀವು ಮನೆಮುರುಕರು...

(ಗೊಂದಲ)

ಶ್ರೀ ಸಿ. ಬೈರೇಗೌಡ.— ರಾಜ್ಯದ ಬೊಕ್ಕಸವನ್ನು ಪಾಪರ್ ಮಾಡಿರತಕ್ಕವರು ಯಾರು ಅಂತ ಜನರಿಗೆ ಗೊತ್ತಿದೆ.

(ಗೊಂದಲ)

ಶ್ರೀ ಪಿ.ಜಿ.ಆರ್. ಸಿಂಧ್ಯ.— ನೀವು ಸೆಕೆಂಡ್ಸ್ ಮೇಲೆ ಏತಕ್ಕೆ ಮಾತನಾಡುತ್ತಿದ್ದೀರೆಂದು ನನಗೆ ಗೊತ್ತಿತ್ತು.

(ಗೊಂದಲ)

ಶ್ರೀ ಸಿ. ಬೈರೇಗೌಡ.— ಮಾನ್ಯ ಅಧ್ಯಕ್ಷರೇ, ಇಷ್ಟು ಮಾತುಗಳನ್ನಾಡಲು ಅವಕಾಶ ಕೊಟ್ಟಿಂಥ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† SRI. B. I. PATIL (Uahagaon):— Mr. Speaker Sir, I am in a confused position as to whether I should welcome or oppose the Address of the Governor to the Joint Session of the Legislature. Anyway, I would like to give a few suggestions for the consideration of the Government.

At the outset, in the Governor's Address, it has been mentioned on page–9 about the welfare of the Minorities and Backward Classes. However, I am pained to note that there is no mention whatsoever about the linguistic minority people residing in the border areas. In Belgaum district 23% of the people are Marathi speaking which is a linguistic minority in the state. As per the Minorities Act, the Government orders, Circulars and other communications pertaining to the administration of the border areas should be in Marathi. By doing this only justice can be done to them, secondly, Kannada language has been made compulsory in the disputed border areas also which has a predominant population. On the contrary, in border areas of Maharashtra, the Maharasthra Government has not made Marathi compulsory. Therefore, the Government of Karnataka should not impose Kannada language on the Marathi people residing in the disputed border areas.

Further Sir, the Karnataka–Mahara htra boundary dispute is pending unsolved for the last 33 years. The former Chief Minister Sri Nijalingappa has accepted that there is a dispute about the boundary between the two States and had urged that it should be solved amicably. I would make a special request to the Hon. Chief Minister to take up this issue with the Central Government and see that it is solved immediately. The verdict of the people residing in those areas in electing four MES candidates is a clear indication of their desire. Irrespective of the Government in power, we should bow to the verdict of the people.

ಶ್ರೀ ವಾಟಾಳ್ ನಾಗರಾಜ್.— ಮಾನ್ಯ ಅಧ್ಯಕ್ಷರೇ, ನನ್ನದೊಂದು ಕ್ರೀಯಾಲೋಪವಿದೆ. ಅದೇನೆಂದರೆ ಗಡಿ ಸಮಸ್ಯೆ ಬಗೆಹರಿಸುವ ಬಗ್ಗೆ ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಏನೂ ಇಲ್ಲ. ಅವರು ಎಷ್ಟು ಓಟಿನಿಂದ ಗೆದ್ದು ಬಂದಿರುತ್ತಾರೆಂಬುದರ ಬಗ್ಗೆ ಸಹ ಅದರಲ್ಲಿಲ್ಲ. ಆದರೆ ಅವರ ಕ್ಷೇತ್ರದ ಬಗ್ಗೆ ಮಾತನಾಡಲು ನಮ್ಮದೇನು ತಕರಾರು ಇಲ್ಲ.

MR. SPEAKER.— There is no Point of Order.

SRI B. I. PATIL.— Coming to the developmental activity in the disputed border areas, I must say that it has been utterly neglected. There is a lot of scope for industrial development in and around Belgaum. The roads and communications are utterly neglected especially in rural areas of Khanapur and Belgaum talukas. The Government should take special steps to improve the roads and communication facilities. Similarly, the drinking water and water for irrigation, there is an acute scarcity. The Government should take up some special schemes to solve these problems.

Another major problem faced by the farmers of the disputed border areas is that there is a surplus sugarcane production of 8 to 10 lakh tonnes in Khanapur and Belgaum talukas and in other talukas of the border area. The Government has imposed a ban on transportation of this surplus sugarcane to the sugar factories in Maharashtra. By this, the farmers are unable to sell their sugarcane either in Karnataka or take it outside. The Government should give immediate direction to the Deputy Commissioner, Belgaum to allow the farmers to take sugarcane to the sugar factories in Maharashtra. While allowing such transporation, the Government should not impose the purchase tax.

Another point I would like to bring to the notice of the Hon'ble Speaker is that I being the Leader of the MES Groud request the Hon'ble Speaker to provide me a seat in the front row,

Lastly, I would like to say that my other friends don't know either Kannada or English. Therefore, I request the Hon'ble Speaker that necessary arrangements be made to record their speeches either in Marathi or Hindi. With these few words I thank the Chair for having given me this opportunity to speak.

12-00 Noon

† ಶ್ರೀ ಎಸ್. ಬಂಗಾರಪ್ಪ (ಸೊರಬ).— ಮಾನ್ಯ ಅಧ್ಯಕ್ಷರೆ, ನಾನು ನನ್ನ ವೈಯಕ್ತಿಕ ವಿವರಣೆಯನ್ನು ಕೊಡಬೇಕೆಂಬ ದೃಷ್ಟಿಯಿಂದ ನಿಂತಿದ್ದೇನೆ. ಮೊನ್ನೆ ಅಥವಾ ಆಚೆ ಮೊನ್ನೆ ಎಂದು ನನ್ನ ಭಾವನೆ, ಆ ವೇಳೆಯಲ್ಲಿ ನಾನು ಸದನದಲ್ಲಿ ಇರಲಿಲ್ಲ. ಬಹುಶಃ ಬಂದು ಹೋಗಿದ್ದೆ ಎಂದು ಕಾಣುತ್ತದೆ. ಮಾನ್ಯ ವಿರೋಧ ಪಕ್ಷದ ನಾಯಕರು ತಮ್ಮ ಭಾಷಣವನ್ನು ಮಾಡಬೇಕಾದರೆ ಅಂದರೆ ಮಾನ್ಯ ರಾಜ್ಯಪಾಲರ ಭಾಷಣಕ್ಕೆ ನಂದನೆಯನ್ನು ಸಲ್ಲಿಸುವ ಕಾಲಕ್ಕೆ ನಮ್ಮ ಸೊರಬ ತಾಲ್ಲೂಕಿನಲ್ಲಿ ನನ್ನ ಬೆಂಬಲಿಗರು ಜನತಾದಳದವರ ಮೇಲೆ ಹಲ್ಲೆ ಮಾಡಿದ್ದಾರೆಂದು ಹೇಳಿದ್ದು ಪತ್ರಿಕೆಯಲ್ಲಿ ಬಂದಿದೆ. ಈ ವಿಚಾರವನ್ನು ಪತ್ರಿಕೆಯಲ್ಲಿ ಓದಿದ ಮೇಲೆ ಗೊತ್ತಾಯಿತು. ನನಗೆ ಗೊತ್ತಿರುವ ಹಾಗೆ ಇದುವರೆಗೆ ನಮ್ಮ ತಾಲ್ಲೂಕಿನಲ್ಲಿ ಇವರ ಮೇಲೆ ಇವರು, ಇವರ ಮೇಲೆ ಅವರು ಹಲ್ಲೆನಡೆಸಿರುವಂತ ಸಂದರ್ಭಗಳಿಲ್ಲ. ಆದ್ದರಿಂದ ಅದನ್ನು ನಾನು ಅಲ್ಲಗಳೆಯುತ್ತೇನೆ. ಇಷ್ಟು ವರ್ಷದ ನನ್ನ ರಾಜಕಾರಣದಲ್ಲಿ ನಮ್ಮ

ತಾಲ್ಲೂಕಿನಲ್ಲಿ ಹಲ್ಲೆಪಲ್ಲೆ ನಡೆದಿಲ್ಲ. ಯಾರಾದರೂ ಮಾಡಿದ್ದರೆ ಅದನ್ನು ಖಂಡಿಸತಕ್ಕವನು ನಾನು. ಬಹಿರಂಗ ಸಭೆ ಮಾಡಿದ್ದೇವೆ. ಮೆರವಣಿಗೆ ನಡೆಸಿದ್ದೇವೆ. ಯಾವ ಸಂದರ್ಭದಲ್ಲೂ ಹಲ್ಲೆ ನಡೆದಿಲ್ಲ. ಹಲ್ಲೆ ವಿಚಾರ ನಡೆದಿದ್ದರೆ ಯಾರಾದರೂ ನನಗೆ ಗೊತ್ತಿಲ್ಲದ ಹಾಗೆ ಮಾಡಿದ್ದರೆ ಆ ಬಗ್ಗೆ ಕ್ರಮ ತೆಗದು ಕೊಳ್ಳಲು ಪೊಲೀಸ್ ಇಲಾಖೆ ಇದೆ ರಕ್ಷಣ ಇಲಾಖೆ ಇದೆ. ದೂರು ಕೊಟ್ಟಿದರೆ ಗೃಹ ಇಲಾಖೆ ಮುಖ್ಯಮಂತ್ರಿಗಳ ಕೈಯಲ್ಲೇ ಇರುವುದರಿಂದ ಅವರು ತನಿಖೆ ನಡೆಸಿ ಕ್ರಮ ತೆಗೆದುಕೊಳ್ಳಲಿ. ಆದರೆ ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಈ ವರದಿಯನ್ನು ಯಾರು ಕೊಟ್ಟರೋ ಗೊತ್ತಿಲ್ಲ.

ಶ್ರೀ ಡಿ. ಬಿ. ಚಂದ್ರೇಗೌಡ.— ನನಗೆ ಪತ್ರ ಬಂದಿತ್ತು.

ಶ್ರೀ ಎಸ್. ಬಂಗಾರಪ್ಪ.—ಪತ್ರ ಬಂದ ತಕ್ಷಣ ಹಾಗೆ ಹೇಳಿದರೆ ಅದು ಪತ್ರಿಕೆಯಲ್ಲಿ ಬರುತ್ತದೆ. ನಂತರ ಅದರ ಪರಿಣಾಮ ಏನಾಗುತ್ತದೆಂದು ವಿಚಾರ ಮಾಡುವುದು ಒಳ್ಳೆಯದು. ಅದು ಸತ್ಯವೋ ಅಸತ್ಯವೋ ಎಂದು ಮೊದಲು ವಿಚಾರ ಮಾಡಬೇಕು. ವಿರೋಧ ಪಕ್ಷದ ನಾಯಕರಿಗೆ ಜವಾಬ್ದಾರಿ ಇದೆ ಆದ್ದರಿಂದ ಅವರು ಈ ರೀತಿ ಹೇಳಿಕೆ ಕೊಡತಕ್ಕ ಅವಶ್ಯಕತೆಯಿರಲಿಲ್ಲವೆಂದು ನಾನು ಭಾವಿಸಿದ್ದೇನೆ. ತಾವು ಯಾವಾಗಲೂ ಮಾತನಾಡುವವರಲ್ಲವೆಂಬುದು ನನಗೆ ಗೊತ್ತು. ಒಂದು ವೇಳೆ ಆ ರೀತಿ ಮಾತನಾಡಬೇಕೆಂಬ ಭಾವನೆ ಇದ್ದರೆ ಅದಕ್ಕೆ ಉತ್ತರ ಇರುತ್ತದೆ. ನಮಗೂ ಪತ್ರ ಬರೆಯುತ್ತಾರೆ ನಿಮಗೂ ಬರೆದಿರಬಹುದು. ಹೀಗೆ ಪತ್ರ ಬಂದಾಕ್ಷಣ ಶಾಸನ ಸಭೆಯಲ್ಲಿ ಈ ರೀತಿ ಹೇಳಿದರೆ ಅದು ಪತ್ರಿಕೆಯಲ್ಲಿ ಬರುತ್ತದೆ. ಪತ್ರಿಕೆ ಓದಿದವರು ಏನು ತಿಳಿದುಕೊಳ್ಳುತ್ತಾರೆ ? ಬಂಗಾರಪ್ಪನವರ ಕಡೆಯವರೂ ಹಲ್ಲೆ ಮಾಡುತ್ತಾರೆಂದು ತಿಳಿದುಕೊಳ್ಳುತ್ತಾರೆ. ದಯಮಾಡಿ ತಾವು ಒಂದು ಕೆಲಸ ಮಾಡಿ. ನಾನು ನಿಮ್ಮ ಜೊತೆಯಲ್ಲಿ ಬರುವುದಿಲ್ಲ. ನಮ್ಮ ತಾಲ್ಲೂಕು ನಿಮಗೆ ಹೊಸದೇನು ಅಲ್ಲ. ವಿರೋಧ ಪಕ್ಷದ ನಾಯಕರಾಗಿ ನನ್ನ ತಾಲ್ಲೂಕಿಗೆ ಹೋಗಿಬನ್ನಿ. ಅಲ್ಲಿ ಒಂದಾದರೂ ಹಲ್ಲೆ ನಡೆದಿದೆಯೇ ಎಂಬುದನ್ನು ವಿಚಾರ ಮಾಡಿ. ಒಂದು ವೇಳೆ ಹಲ್ಲೆ ನಡೆದಿದ್ದು ದೂರು ಕೊಟ್ಟಿದ್ದರೆ ಮುಖ್ಯ ಮಂತ್ರಿಗಳಲ್ಲಿ ಅದನ್ನು ವಿನಂತಿ ಮಾಡಿದರೆ ಅವರು ಕ್ರಮ ತೆಗೆದುಕೊಳ್ಳುತ್ತಾರೆಂದು ಹೇಳುತ್ತೇನೆ. ಈ ರೀತಿ ಕಾಂಗ್ರೆಸ್‌ನವರಿಂದ ಎಲ್ಲ ಕಡೆ ಹಲ್ಲೆ ನಡೆದಿದೆ ಎಂದು ಜನರಲೈಸ್ ಮಾಡುವುದು ನಿಮಗೂ ಒಳ್ಳೆಯದಲ್ಲ ಮತ್ತು ಶಾಸನ ಸಭೆಗೂ ಗೌರವ ತರತಕ್ಕದ್ದು ಅಲ್ಲ. ಆ ರೀತಿ ವಿರೋಧ ಪಕ್ಷದ ನಾಯಕರು ಹೇಳಿರುವುದು ಸತ್ಯಕ್ಕೆ ದೂರವಾದುದು. ಎಂದೂ ಆ ರೀತಿ ನಡೆದಿಲ್ಲ, ನಡೆಯುವುದಕ್ಕೆ ನಾವು ಬಿಡುವುದೂ ಇಲ್ಲವೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ದಯಮಾಡಿ ಅಂಥ ವಿಚಾರಗಳನ್ನು ಮಾತ ನಾಡಬೇಕಾದರೆ ಮೊದಲಂ ನನ್ನನ್ನು ಕೇಳಿ ನಾವು-ನೀವು ಹೊಸಬರೇನೂ ಅಲ್ಲ. ನಿಮ್ಮವರು ಈ ರೀತಿ ಮಾಡಿದ್ದಾರೆಂದು ಹೇಳಿ, ನಾನು ಅವರಿಗೆ ಬುದ್ಧಿ ಹೇಳುತ್ತೇನೆ ಮತ್ತು ತೀವ್ರತರವಾದ ಹಲ್ಲೆ ನಡೆದಿದ್ದರೆ ಕ್ರಮ ಕೈಗೊಳ್ಳುವುದಕ್ಕೆ ನಿಮ್ಮ ಜೊತೆ ನಾನೂ ಸೇರುತ್ತೇನೆ. ನಾನು ರಾಜಕೀಯಕ್ಕೆ ಬರುವ ಮುನ್ನ ಆ ಒಂದು ತೀರ್ಮಾನವನ್ನು ಇಟ್ಟುಕೊಂಡೇ ಬಂದಿದ್ದೇನೆ. ಹಾಗಿರಬೇಕಾದರೆ, ನಿನ್ನೆ ಮತ್ತು ಬಂಗಾರಪ್ಪನವರ ಕ್ಷೇತ್ರದಲ್ಲಿ ಹಲ್ಲೆ ನಡೆದಿದೆ ಎಂದು ಹೇಳುವುದು, ನಾಳೆ ಇನ್ನೊಂದು ಹೇಳುವುದು ಸರಿಯಲ್ಲ. ನಾನು ಶೃಂಗೇರಿ ಕ್ಷೇತ್ರದಲ್ಲಿ ಹಲ್ಲೆ ಮಾಡಿದ್ದಾರೆಂದು ಹೇಳಿದರೆ ಹೇಗಿರುತ್ತದೆ ? ಹಾಗೆ ಹೇಳುವುದು ತಪ್ಪಾಗುತ್ತದೆ. ದಯಮಾಡಿ ಜನರಲೈಸ್ ಮಾಡಿ ಮಾತನಾಡುವ ಪದ್ಧತಿ ಎಂದೂ ಕೂಡ ಒಳ್ಳೆಯದಲ್ಲ. ನಿಮ್ಮ ಸ್ಥಾನದ ಗೌರವಕ್ಕೂ ಒಳ್ಳೆಯದಲ್ಲ. ಇಷ್ಟು ಮಾತ್ರ ಹೇಳಿ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಡಿ. ಬಿ. ಚಂದ್ರೇಗೌಡ (ಮಾನ್ಯ ವಿರೋಧ ಪಕ್ಷದ ನಾಯಕರು).—ನಾನು ಏನು ಮಾತನಾಡಬೇಕು, ಎಷ್ಟು ಜವಾಬ್ದಾರಿಯಿಂದ ನಡೆದುಕೊಳ್ಳಬೇಕು ಎಂಬುದನ್ನು ತಿಳಿಯದೆ ನಾನು ಇಲ್ಲಿ ಕೂತಿಲ್ಲ. ಆದರೆ ಒಂದು ಡೆಲಿಗೇಷನ್ ಬಂದು ಒಂದು ಪತ್ರ ಕೊಟ್ಟರು. ಅದೇ ದಿವಸ ರಾಜ್ಯಪಾಲರ ಭಾಷಣದ ಮೇಲೆ ಮಾತನಾಡುವಾಗ ನಾನು ಅದನ್ನು ಪ್ರಸ್ತಾಪ ಮಾಡಿದೆ. ಕಂಪ್ಲೇಂಟ್ ಕೊಟ್ಟರೆ ಅಲ್ಲಿರತಕ್ಕ ಸಬ್-ಇನ್‌ಸ್ಪೆಕ್ಟರ್ ತೆಗೆದುಕೊಳ್ಳುವುದಿಲ್ಲ. ಎಂದು ಹೇಳಿದರು. ಕಂಪ್ಲೇಂಟ್ ಕೊಟ್ಟಿದ್ದರೆ ಅದರ ಕಾಪಿ ಕೊಡಿ ಎಂದು ತಾವು ಹೇಳುತ್ತೀರಿ.

ಶ್ರೀ ಎಸ್. ಬಂಗಾರಪ್ಪ.—ಎಸ್. ಪಿ. ಯವರಿಗೆ ದೂರು ಕೊಡಿ.

ಶ್ರೀ ಡಿ. ಬಿ. ಚಂದ್ರೇಗೌಡ.—ಅದು ನನಗೆ ಗೊತ್ತಿದೆ. ನನಗೆ ಪತ್ರ ಬಂದಿತ್ತು. ಅದನ್ನು ಸಭೆಯ ಗಮನಕ್ಕೆ ತಂದಿದ್ದೇನೆ. ನಾನು ಯಾರನ್ನೋ ಕೇಳಿ ಹೇಗೇ ಮಾತನಾಡಬೇಕು ಎಂಬ ಬುದ್ಧಿವಾದ ಅಥವಾ ಸರ್ಟಿಫಿಕೇಟ್ ನನಗೆ ಬೇಕಾಗಿಲ್ಲ. ನಾವು ಇಲ್ಲಿ ಸ್ನೇಹಿತರಾಗಿ ಮಾತನಾಡೋಣ.

ಶ್ರೀ ಎಸ್. ಬಂಗಾರಪ್ಪ.—ನಾನೂ ಸ್ನೇಹಿತನಾಗಿಯೇ ಹೇಳಿದ್ದೇನೆ. ಸರ್ಟಿಫಿಕೇಟ್ ಕೊಡಬೇಕೆಂಬ ದೃಷ್ಟಿಯಿಂದ ನಾನಂ ಹೇಳಿಲ್ಲ. ಒಂದು ವೇಳೆ ಸರ್ಟಿಫಿಕೇಟ್ ಕೊಡಬೇಕು ಎಂಬ ಕಾಲ ಬಂದರೆ

ಸ್ಪಷ್ಟವಾಗಿಯೇ ಕೊಡೋಣ, ಕೊಡುವುದಕ್ಕೆ ನಾವು ಸಿದ್ಧರಾಗಿದ್ದೇವೆ. ಆದರ ಬಗ್ಗೆ ವಿರೋಧ ಇಲ್ಲ ಆದರೆ ಆ ವಟ್ಟಕ್ಕೆ ಹೋಗಬಾರದು ಎಂದು ಸೌಜನ್ಯತೆಯಿಂದ ಹೇಳಿದ್ದೇನೆ.

ಪ್ರಕಟಣೆ

ಅಧ್ಯಕ್ಷರು.—ಈಗ ಒಂದು ಪ್ರಕಟಣೆ ಇದೆ. ವಿಧಾನ ಪರಿಷತ್ತಿನ ಸಭಾಪತಿಯವರಿಂದ ಈ ಕೆಳಕಂಡ ಸಂದೇಶ ಬಂದಿದೆ.—

"ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಮತ್ತು ನಡವಳಿಕೆಯ ನಿಯಮ ೧೧೪ರ ಮೇರೆಗೆ ವಿಧಾನಸಭೆಯಿಂದ ಅಂಗೀಕಾರವಾದ ಈ ಕೆಳಕಂಡ ವಿಧೇಯಕವನ್ನು ಕರ್ನಾಟಕ ವಿಧಾನ ಪರಿಷತ್ತಿನಲ್ಲಿ ದಿನಾಂಕ ೨೧ನೇ ಡಿಸೆಂಬರ್ ೧೯೮೯ ರಂದು ಅನುಮೋದಿಸಲಾಯಿತೆಂದು ತಿಳಿಸುತ್ತೇನೆ."

೧೯೮೯ನೇ ಇಸವಿಯ ಕರ್ನಾಟಕ ಧನ ವಿನಿಯೋಗ (ನಂ. ೨) ವಿಧೇಯಕ.

ಶ್ರೀ ಎಂ. ಮಹದೇವ್.—ಅಧ್ಯಕ್ಷರೆ ನನಗೆ ಮಾತನಾಡುವುದಕ್ಕೆ ಅವಕಾಶ ಕೊಡುತ್ತೇನೆ ಎಂದು ಹೇಳಿದ್ದಿರಿ. ಆದರೆ ಅವಕಾಶ ಕೊಡಲಿಲ್ಲ.

ಅಧ್ಯಕ್ಷರು.—ನಾನು ಬಹಳ ಮಂದಿ ಮಾನ್ಯ ಸದಸ್ಯರಿಗೆ ಅವಕಾಶ ಕೊಡುತ್ತೇನೆ ಎಂದು ಹೇಳಿ ನನ್ನ ಕಚೇರಿಗೆ ಬಂದಾಗ ಹೇಳಿದ್ದು ನಿಜ. ಆದರೆ ಈ ಸದನದ ಕಾರ್ಯಕಲಾಪ ಸಮಿತಿಯ ತೀರ್ಮಾನವನ್ನು ಕೂಡ ತಮ್ಮ ಅವಗಾಹನೆಗೆ ತಂದಿದ್ದೇನೆ. ಅದರ ಪ್ರಕಾರ ಇವತ್ತು ೧೧ ಘಂಟೆಗೆ ಚರ್ಚೆ ಮುಂಕ್ತಾಯವಾಗಿ ಮಾನ್ಯ ಮುಖ್ಯಮಂತ್ರಿಗಳು ಚರ್ಚೆಗೆ ಉತ್ತರ ಕೊಡಬೇಕಾಗಿತ್ತು. ಆದರೆ ೧೨ ಘಂಟೆಗೆ ಉತ್ತರ ಪ್ರಾರಂಭ ಮಾಡಬೇಕೆಂದು ನಾನು ಸೂಚನೆ ಕೊಟ್ಟೆ ಅದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಒಪ್ಪಿದರು. ಈಗ ನಾನು ಯಾವಯಾವ ಪಕ್ಷದವರು ಎಷ್ಟೆಷ್ಟು ನಿಮಿಷಗಳ ಸಮಯ ತೆಗೆದುಕೊಂಡಿದ್ದಾರೆಂಬುದನ್ನು ಪುನಃ ಪ್ರತಿಪಾದನೆ ಮಾಡಬೇಕಾಗಿಲ್ಲ.

ಶ್ರೀ ಪಿ. ಜಿ ಆರ್. ಸಿಂಧ್ಯ.—ಮಾನ್ಯ ಅಧ್ಯಕ್ಷರೆ, ಒಂದು ಸಬ್‌ಮಿಷನ್ ನಾನು ಮಾಡುತ್ತೇನೆ. ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ೨೧ ಮಂತ್ರಿ ೨೨ನೇ ತಾರೀಖು ಸಂಜೆ ಎಷ್ಟು ಹೊತ್ತಾದರೂ ಕುಳಿತು ಕೊಂಡು ಎಲ್ಲವನ್ನೂ ಮುಗಿಸಬೇಕೆಂದು ತೀರ್ಮಾನ ಮಾಡಿದ್ದು ನಿಜ, ರಾತ್ರಿ ೯ ಗಂಟೆಯಾದರೂ ಕುಳಿತುಕೊಂಡು ಮುಗಿಸಬೇಕು ಎಂದು ತೀರ್ಮಾನ ಆಗಿದೆ. ನಾನು ಶನಿವಾರ ಅರ್ಧ ದಿವಸ ಇಟ್ಟು ಕೊಳ್ಳೋಣ ಅಂತ ಹೇಳಿದಾಗ ಮಾನ್ಯ ಸಭಾ ನಾಯಕರು ಯಾವುದೇ ಕಾರಣದಿಂದ ಶನಿವಾರ ಕುಳಿತು ಕೊಳ್ಳುವುದಕ್ಕಾಗುವುದಿಲ್ಲ, ಶುಕ್ರವಾರವೇ ಮುಗಿಸಬೇಕು ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ಅನೇಕ ಜನ ಹೊಸಬರು ಈಗ ಸದಸ್ಯರಾಗಿ ಬಂದಿದ್ದಾರೆ. ಅವರಿಗೆ ಹೇಳುವಂತಹ ಅನೇಕ ವಿಷಯಗಳಿರುತ್ತವೆ. ಇನ್ನು ಎರಡು ತಿಂಗಳು ವಿಧಾನಸಭೆ ಸೇರುವುದಿಲ್ಲ. ಆದ್ದರಿಂದ ಮಾತನಾಡತಕ್ಕ ಉತ್ಸಾಹ ಶಾಸಕಮಿತ್ರರಲ್ಲಿದೆ. ಆದ್ದರಿಂದ ದಯವಾಡಿ ಎರಡೂವರೆ ಗಂಟೆ ನಂತರ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡಲಿ. ಅದಕ್ಕೆ ಎಲ್ಲರೂ ದಯವಿಟ್ಟು ಒಪ್ಪಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ —ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು ರೈತರ ಸಾಲದ ಮೇಲಿನ ಚರ್ಚೆಗೆ ಉತ್ತರ ಕೊಡಬೇಕೆಂದು ಇಲ್ಲಿಗೆ ಎರಡು ಸಾರಿ ಬಂದಿದ್ದು, ಎರಡೂ ಸಾರಿ ಸಮಯವನ್ನು ನಿಗದಿ ಮಾಡಿದ್ದೀರಿ. ಈಗ ಅವರು ಸಭೆಯಲ್ಲಿ ಇದ್ದಾರೆ. ಬಹುಶಃ ಅವರು ಉತ್ತರ ಕೊಟ್ಟಮೇಲೆ ರಾಜ್ಯಪಾಲರ ಭಾಷಣದ ಮೇಲೆ ಸದಸ್ಯರು ಮಂತ್ರ ಚರ್ಚೆ ಮಾಡುವುದಕ್ಕೆ ತಾವು ಅವಕಾಶ ಮಾಡಿಕೊಡಬೇಕೆಂದು ಹೇಳುತ್ತೇನೆ.

ಶ್ರೀ ವೀರೇಂದ್ರ ಪಾಟೀಲ್.—ಇದು ಅಧ್ಯಕ್ಷರಿಗೆ ಬಿಟ್ಟಿದ್ದು. ಅವರು ಏನು ನಿರ್ಧಾರ ತೆಗೆದುಕೊಳ್ಳುತ್ತಾರೋ ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಎರಡು ಗಂಟೆಗಳ ಕಾಲ ನಾನು ಉತ್ತರ ಕೊಡುವುದನ್ನು ಮುಂದೂಡಬೇಕೆಂಬ ಅಭಿಪ್ರಾಯ ಏನಿದೆ ಈ ಬಗ್ಗೆ ಸಭೆಯ ಅಧ್ಯಕ್ಷರು ಯಾವ ನಿರ್ಣಯಕ್ಕೆ ಬರುತ್ತಾರೋ ಅದಕ್ಕೆ ನನ್ನ ಆಕ್ಷೇಪಣೆ ಇಲ್ಲ.

ಅಧ್ಯಕ್ಷರು.—ಸಂತೋಷ, ಈಗ ಯಾರು ಉತ್ತರ ಕೊಡಬೇಕೋ ಅವರೇ ಈ ಬಗ್ಗೆ ಒಪ್ಪಿರುವುದರಿಂದ ಬಹಳ ಸಂತೋಷ ಇದರಿಂದಾಗಿ ಇನ್ನೂ ನಾಲ್ಕಾರು ಸದಸ್ಯರು ಮಾತನಾಡಬಹುದು. ಆದ್ದರಿಂದ ಮಾನ್ಯ ಮುಖ್ಯಮಂತ್ರಿಗಳ ಉತ್ತರ ೨ ಗಂಟೆಗೆ ಎಂದು ನಿಗದಿ ಮಾಡುತ್ತೇನೆ. ಈಗ ಎರಡು ಗಂಟೆಯವರೆಗೆ ಚರ್ಚೆ ಮುಂದುವರೆಯಲಿ. ಹಣಕಾಸಿನ ಮಂತ್ರಿಗಳು ರಾಜ್ಯದ ಹಣಕಾಸಿನ ಸ್ಥಿತಿ ಬಗ್ಗೆ ಒಂದು ಸ್ಟೇಟ್‌ಮೆಂಟ್ ಮಾಡುತ್ತೇನೆ ಎಂದು ಹೇಳಿದ್ದರು. ಈಗ ಸ್ಟೇಟ್‌ಮೆಂಟ್ ಮಾಡಬಹುದು.